॥ ಶ್ರೀರಾಘವೇಂದ್ರಗುರುಭ್ಯೋ ನಮಃ ॥

# ಭಾಗ – ೪

೧. ಇಂಥಾ ಗುರುಗಳಾ ಕಾಣೆನೋ – ಗುರುಜಗನ್ನಾಥವಿಠಲ ........ ೨
೨. ರಾಯನೆಂದರೆ ಗುರು ರಾಯ – ಗುರುಜಗನ್ನಾಥವಿಠಲ ........ ೩
೩. ಎಂತು ಬಣ್ಣಿಸಲಮ್ಮಯ್ಯಾ – ಗುರುಜಗನ್ನಾಥವಿಠಲ ........ ೩
೪. ಎಂಥಾ ದಯವಂತನೋ – ಗುರುಜಗನ್ನಾಥವಿಠಲ ........ ೪
೫. ಮಾಮವ ಯತಿಕುಲೋತ್ತುಂಗ – ಗುರುಜಗನ್ನಾಥವಿಠಲ ........ ೪
೬. ಗುರುರಾಜಾ ಗುರುರಾಜಾ – ಗುರುಜಗನ್ನಾಥವಿಠಲ ........ ೫
೭. ದಯಾನಿಧೇ ಶ್ರೀರಾಘವೇಂದ್ರ – ಗುರುಜಗನ್ನಾಥವಿಠಲ ........ ೫
೮. ನೀ ಪಾಲಿಸೋ ಗುರುರಾಯ – ಗುರುಜಗನ್ನಾಥವಿಠಲ ........ ೬
೯. ಕಾಯೋ ಕಾಯೋ – ಗುರುಜಗನ್ನಾಥವಿಠಲ ........ ೬
೧೦. ಶ್ರೀ ಗುರುವರ ಮಾಂ ಪಾಲಯ – ಗುರುಜಗನ್ನಾಥವಿಠಲ ........ ೭
೧೧. ಶೇಷಾಂಶ ಪ್ರಹ್ಲಾದರಾಯಾ – ಗುರುಜಗನ್ನಾಥವಿಠಲ ........ ೭
೧೨. ರಥವಾನೇರಿದ ಯತಿವರನ್ಯಾರೇ – ಗುರುಜಗನ್ನಾಥವಿಠಲ ........ ೮
೧೩. ಸ್ವಸ್ತಿ ಶ್ರೀ ಜಯ ಮಂಗಳಂ – ಗುರುಜಗನ್ನಾಥವಿಠಲ ........ ೯
೧೪. ಸ್ವಾಮಿ ಲಾಲಿ – ಗುರುಜಗನ್ನಾಥವಿಠಲ ........ ೯
೧೫. ವಿನಯದಿಂದಲಿ ನಮಿಸುವೆನಾ – ವರದೇಶವಿಠಲ ........ ೯
೧೬. ದುರಿತಾ ಜೀಮೂತವಾತ – ವಿಜಯದಾಸರು ........ ೧೦
೧೭. ಗುರುರಾಜ ನಿಮ್ಮ ನಿಜ ಪರಮ – ಗೋಪಾಲದಾಸರು ........ ೧೧
೧೮. ಕಷ್ಟ ಸಂಸಾರವೆಂಬ ಅಟ್ಟುಳಿಗೆ – ಗೋಪಾಲದಾಸರು ........ ೧೨
೧೯. ಮರೆವರೆ ಎನ್ನ ರಾಘವೇಂದ್ರ – ವಾಸಿದೇವ ವಿಠಲ (ವ್ಯಾಸ ತತ್ವಜ್ಞರು) ........ ೧೨
೨೦. ಮುನಿಗಳ ನೋಡಿರೊ ಭಕುತಿ – ಗುರುಗೋಪಾಲವಿಠಲ ........ ೧೩
೨೧. ರಾಘವೇಂದ್ರ ಗುರುರಾಯಾ ಘೋರ – ಜಗನ್ನಾಥವಿಠಲ ........ ೧೫
೨೨. ಸ್ಮರಿಸಿ ಬೇಡುವೆನು ನಾ – ಜಗನ್ನಾಥವಿಠಲ ........ ೧೬
೨೩. ಯೋಗಿ ಬಾರೋ ನೀ ತ್ಯಾಗಿ ಬಾರೋ – ಜಗನ್ನಾಥವಿಠಲ ........ ೧೭
೨೪. ಮಂಗಳಂ ಶ್ರೀರಾಘವೇಂದ್ರಗೆ – ಜಗನ್ನಾಥವಿಠಲ ........ ೧೮

೨೫. ರಾಘವೇಂದ್ರ ಗುರುರಾಯಾ – ರಾಮಚಂದ್ರವಿಠ್ಠಲ ........ ೧೮
೨೬. ಕರೆದು ಕೈಪಿಡಿಯೊಯನ್ನಾ – ರಾಮಚಂದ್ರವಿಠ್ಠಲ ........ ೧೯
೨೭. ವಸುಧೆಯೊಳಗೆಣೆಗಾಣೆನೋ – ವೆಂಕಟೇಶವಿಠ್ಠಲ ........ ೨೧
೨೮. (ಶ್ರೀ ವರದಗೋಪಾಲವಿಠಲರ ಶಿಷ್ಯರು ) ........ ೨೧

೨೯. *ಇಂದು ಎನ್ನನು ಬಂದು ರಕ್ಷಿಸೊ – ಶ್ರೀಜನಾರ್ಧನ ವಿಠಲ* ....................................................... ೨೧
೩೦. *ಸುಪ್ವಿ ಸಾಧ್ವಿಯರು, ರಾಘಾವೇಂದ್ರರ ಪಾಡಿ – ಪ್ರಾಣೇಶವಿಠ್ಠಲ* ............................................... ೨೨
೩೧. *ಜಯಮಂಗಳಂ ನಿತ್ಯ ಶುಭಮಂಗಳಂ – ಪ್ರಾಣೇಶವಿಠಲ* ............................................................ ೨೩
೩೨. *ಶ್ರೀರಾಮಚಂದ್ರಾಂಘ್ರಿ ಸರಸಿರುಹ – ಪ್ರಾಣೇಶವಿಠಲ* ............................................................... ೨೪
೩೩. *ಮಂಗಳಂ ಮಂಗಳಂ । ಜಯ – ಪ್ರಾಣೇಶವಿಠಲ* ....................................................................... ೨೪
೩೪. *ಪಾಲಿಸು ಸದ್ಗುಣಸಾಂದ್ರ – ವೆಂಕಟೇಶವಿಠಲ (ಶ್ರೀಜಗನ್ನಾಥದಾಸರ ಶಿಷ್ಯರು)*.................................. ೨೫

## ಶ್ರೀ ಗುರುಭ್ಯೋ ನಮಃ ಹರಿಃ ಓಂ

## ಇಂಥಾ ಗುರುಗಳಾ ಕಾಣೆನೋ – ಗುರುಜಗನ್ನಾಥವಿಠಲ

ರಾಗ : ಶ್ರೀರಾಗ ತ್ರಿವಿಡಿತಾಳ

ಇಂಥಾ ಗುರುಗಳ ಕಾಣೆನೋ ಈ ಜಗದೊಳು ನಾ ।
ಇಂಥಾ ಗುರುಗಳನೆಂದು ಕಾಣೆನೋ ॥ ಪ ॥
ನಂತ ಚೇತನರಂತರ ಬಹಿರದಿ ನಿಂತು ಕರ್ಮವವರಂತೆ ಮಾಳ್ಪಾ
ನಂತ ಮಹಿಮಾನಂತನಾಂಶಜರಿಂಥಾ ॥ ಅ । ಪ ॥

ತುಂಗಾ ತೀರದಿ ನಿವಾಸಾ ಮಂತ್ರಾಲಯಕೀಶ । ತುಂಗ ವಿಕ್ರಮ ಜಗದೀಶಾ ಶ್ರೀಹರಿ ದಾಸಾ ॥
ಮಂಗಲಾತ್ಮಕ ವೃಂದಾವನ ದೇಶಾ ಸಾರಿದ ವ್ರತೀಶಾ ।
ಮಂಗಲ ಮಹಿಮ ರಂಗನ ಕರುಣಾಪಾಂಗ ಪಡೆದ ಕೃ ।
ಪಾಂಗ ಯತಿಕುಲೋತ್ತುಂಗ ಮಾಯಿ ಮಾ । ತಂಗ ಸಂಘಕೆ ಸಿಂಗ ದುಷ್ಟ ಭು ।
ಜಂಗ ಗಣವಿಹಂಗ ಸ್ವಮತೋ । ತ್ತುಂಗ ವಾರಿಜ ಭೃಂಗ ಮನ್ಮನೋ ।
ರಂಗ ಬಿಂಬನ ಇಂಗಿತಜ್ಞರ ಸಂಗ ನೀಡಿ । ಕಂಗಳಿಗೆ ತಾವು ಕಂಗೊಳಿಪರಿಂಥಾ ॥ ೧ ॥

ಮೇದಿನಿ ತಳದಲಿ ಜನಿಸೀ ಸುಖತೀರ್ಥರ ಭಜಿಸೀ । ಭೇದಮತವನೆ ಸಾಧಿಸೀ ವಾದದಿ ಜೈಸಿ ।
ಮಾಧವನೆ ಸರ್ವೋತ್ತಮನೆನಿಸಿ ಸ್ವಮತವ ಸ್ಥಾಪಿಸಿ । ಬೋಧಿಸಿ ತತ್ತ್ವವ ಭೇದಿಸಿ ಪರಮತ ।
ಭೇದಿಸಿ ಕುಮತಿಯ ಶೋಧಿಸಿ ತತ್ತ್ವದ । ಹಾದಿಯ ಹಿಡಿಸಿ ಮೋದಕೊಡುವ ಪಂಚ ।
ಭೇದವ ತಿಳಿಸೀ ಸಾದರ ತನ್ನಯ ಪಾದಸೇವೆಯ ।
ಮೋದವ ನೀಡುವ ಮೇದಿನೀ ದಿವಿಜಾರಾಧಿತ ಪದಯುಗ ।
ಶೋಧಿಸಿ ಜನಮನೋ ಖೇದಗೊಳಿಪ ಭ । ವೋದಧಿ ದಾಟಿಸಿ ಶ್ರೀದನ ತೆರದಲಿ ಮೇದಿನಿಯಾಳುವರಿಂಥಾ ॥ ೨ ॥

ಧಿಟ್ಟ ಗುರುಜಗನ್ನಾಥವಿಠಲ ದೂತಾ । ಸೃಷ್ಟಿಯೊಳಗತಿ ವಿಖ್ಯಾತಾ ನೆನಿಸಿದ ಯತಿನಾಥಾ ।
ಕುಷ್ಟಾದಿ ರೋಗದ ಘಾತಾ ಮಾಡುವೊ ದಾತಾ । ಇಷ್ಟಾರ್ಥವಾ ತಾ ಸೃಷ್ಟಿಗೆ ಬೀರುವ ।
ಶಿಷ್ಟಜನರನುತ್ಕೃಷ್ಟದಿ ಪಾಲಿಪ । ಎಷ್ಟು ಪೇಳುವುದೋ ಉತ್ಕೃಷ್ಟನ ಗುಣಗಳ ।

ಭ್ರಷ್ಟರರಿಯರೆಲೆ ಶಿಷ್ಟರು ಬಲ್ಲರು । ಇಷ್ಟೆ ಅಲ್ಲವೀತನ ವಿಶಿಷ್ಟ ಮಹಿಮೆಗ ।
ಳೆಷ್ಟು ಪೇಳಲವಶಿಷ್ಟವೆನಿಪವೋ । ದೃಷ್ಟಿಹೀನರಿಗೆ ದೃಷ್ಟಿ ನೀಡುವ ।
ದೃಷ್ಟ ಮಾತ್ರದಿ ತಿಷ್ಟಿಬಡಿಸುವೊರಿಂಥಾ ॥ ೩ ॥

## ರಾಯನೆಂದರೆ ಗುರು ರಾಯ – ಗುರುಜಗನ್ನಾಥವಿಠಲ

ರಾಗ : ಅಸಾವೇರಿ ತ್ರಿವಿಡಿತಾಳ

ರಾಯನೆಂದರೆ ಗುರುರಾಯ ಸದ್ಗುಣಗಣ । ಕಾಯ ಸುಜನ ಗೇಯ ಮಹರಾಯ ॥ ಪ ॥
ಮಾಯಾ ಮಯ ಭವ ತೋಯನಿಧಿಯೊಳು । ಬಾಯಿ ಬಿಡುವೆನುಪಾಯದಿಂದಲಿ ।
ಕಾಯೋ ದಾತನೆ ನೋಯದಂದದಿ ಕಾಯೋ ಎನ್ನನು ॥ ಅ । ಪ ॥

ನಿನ್ನಾ ನಂಬಿದ ಮಾನವಾ ಭವದೀ ಬನ್ನಾ ಬಡದೆ ತಾನಿರುವಾ ।
ಘನ್ನಾ ಮಹಿಮ ಪಾವನ್ನ ತವ ಪಾದಾ । ಮನ್ನಾ ದೊಳಗೆ ನಿತ್ಯಾ ಚನ್ನಾಗಿ ಭಜಿಸುತ ।
ಧನ್ಯನೆನಿಸುವ ಹೊನ್ನು ಹಣಗಳೂ । ನಿನ್ನ ಇಚ್ಛೆಲಿ ತಾವೆ ಬಪ್ಪವು ।
ಘನ್ನ ಮಹಿಮನೇ ನಿನ್ನ ನಂಬಿದೆ । ಎನ್ನ ಪಾಲಿಸ ನನ್ಯ ರಕ್ಷಕ ॥ ೧ ॥

ಅನ್ನಾ ವಸನವಿಲ್ಲದೆ ನಿತ್ಯಾ ಅನ್ಯಾರ ಬೇಡಿಸೊದಿದೇ ।
ಘನ್ನಾತೆ ನಿನಗಿದೆ ನನ್ಯ ಭಕ್ತನ ಪರ । ರನ್ನಕ್ಕೆ ಗುರಿಮಾಡಿ ಬನ್ನ ಬಡಿಸಿದರೆನ್ನ ।
ನಿನ್ನ ಸೇವಕ ನಿನ್ನ ಪೂಜಕ ನಿನ್ನ ಧ್ಯಾನವ ಮನ್ನದಿಂದಾ ।
ನಿನ್ನ ತ್ಯಜಿಸಿ ಅನ್ಯ ದೈವರ ಮನ್ನಿಸೆನೋ ಪಾವನ್ನಮೂರುತಿ ॥ ೨ ॥

ಹೊಟ್ಟೆಗೋಸುಗ ದೇಶಾ ತಿರುಗಿ ದೇಹಾ । ಕೆಟ್ಟು ಪೋಗಿಹದೋ ಹೀಗಾಗೀ ।
ಎಷ್ಟು ಪೇಳಲಿ ಎನ್ನ ದುಷ್ಟ ಬುದ್ಧಿಲಿ ಜ್ಞಾನ । ನಷ್ಟವಾಗಲು ಬಹು ಭ್ರಷ್ಟಮಾರ್ಗವ ಸೇರಿ ।
ದುಷ್ಟಮತಿಯಲಿ ಶಿಷ್ಟ ದ್ವೇಷವ । ಕಟ್ಟಿ ಕಾದಿದೆ ನಷ್ಟ ತಿಳಿಯದೆ ।
ಕೆಟ್ಟುಪೋಗುವೆ ಥಟ್ಟನೆ ನೀ ಪೊರಿ । ಧಿಟ್ಟಾ ಗುರುಜಗನ್ನಾಥವಿಠಲ ದೂತಾ ॥ ೩ ॥

## ಎಂತು ಬಣ್ಣಿಸಲಮ್ಮಯ್ಯಾ – ಗುರುಜಗನ್ನಾಥವಿಠಲ

ರಾಗ : ಶಂಕರಾಭರಣ ಏಕತಾಳ

ಎಂತು ಬಣ್ಣಿಸಲಮ್ಮಯ್ಯಾ ಈ ಗುರುವರರ ॥ ಪ ॥
ಎಂತು ಬಣ್ಣಿಪೆ ನಾನಂತನಾಂಶ ಜಗ । ದಂತರದೊಳಗಾನಂತ ಮಹಿಮರ ॥ ಅ । ಪ ॥

ಸುರವರನಗರಸಮ ವರಮಂತ್ರಸದನ ಜರಿದು ।
ಸ್ಥಿರವಾಗೀ ಪುರದಲಿ ಮೆರೆಯುತಲಿಹರನ್ನ ॥ ೧ ॥

ಪೂರ್ವಯುಗದೊಳು ಸಾರ್ವಭೌಮನೆನಿಸಿ ।

ಪಾರ್ವರ ಪೊರೆಯಂ ಪೂರ್ವ ಯತಿಯಾದ ॥ ೨ ॥

ದಿನದಿನದಲ್ಲಿ ಮಹ ಕನಕಾಭಿಷೇಕ ಮಾಳ್ಪ ।
ಧನಿಕರ ತೆಜಿಸಿ ನಿರ್ಧನಿಕಗೊಲಿದಿಹರನ್ನ ॥ ೩ ॥

ಕ್ಷೀರಶೇಚನ ನಿತ್ಯ ಸಾರ ಪಂಚಾಮೃತ ಬಿಟ್ಟು ।
ಕೀರುತಿ ಮಾಳ್ಪ ಜನರ ಸೇರಿಕೊಂಡಿಹರನ್ನ ॥ ೪ ॥

ದಾತರೆನಿಸಿ ಜಗದಿ ಖ್ಯಾತರಾಗಿ ಗುರುಜಗ ।
ನ್ನಾಥವಿಠಲನೊಲಿಸಿ ದೂತ ಜನರ ಪೊರೆವೊರ ॥ ೫ ॥

## ಎಂಥಾ ದಯವಂತನೋ – ಗುರುಜಗನ್ನಾಥವಿಠಲ

ರಾಗ : ಧನಶ್ರೀ ತ್ರಿವಿಡಿತಾಳ

ಎಂಥಾ ದಯವಂತನೋ ಸಂತಾರ ನಾಥನೋ ॥ ಪ ॥
ಕಂತೂ ಜನಕಾನ ಪ್ರಿಯ್ಯಾನೋ ಅ । ನಂತಾ ನಂತಾ ಮಹಿಮನೋ ॥ ಅ । ಪ ॥

ರಮ್ಯಾ ಗುಣಾ ಪೂರ್ಣನೋ ಅ । ಗಮ್ಯಾ ಸಚ್ಚರಿತಾನೋ ॥
ನಮ್ಯಾನತರಾ ಪೊರೆವಾನೋ ಈತ ನಮ್ಯಲ್ಲಾರ ಸಲಹೋನೋ ॥ ೧ ॥

ಪ್ರಾಣಾವೇಶಾಯುತನೋ ಜಗ । ತ್ರಾಣಾ ತಾನಾಗಿಹನೋ ॥
ಕ್ಷೋಣೀಯೋಳ್ವಿಖ್ಯಾತಾನೋ ಎನ್ನ । ಪ್ರಾಣಾಗಳಿಗೆ ನಾಥನೋ ॥ ೨ ॥

ಕರುಣಾಶಾಲಿ ಎನಿಪಾನೋ ತನ್ನ । ಚರಣಾ ಸೇವಾ ನೀಡುವನೋ ॥
ಶರಣಾಬ್ಜ ತರಣೀ ಸಮನೋ ಅಂತಃ । ಕರುಣಾದಲ್ಲಿರುವಾನೋ ॥ ೩ ॥

ಜನನೀ ಜನಕಾರೆನಿಪನೋ ಸಕಲ । ಜನರೀಗ ಸಮ್ಮತನೋ ॥
ಜನುಮಾ ಜನುಮದಲೀತನೋ ನಿಶ್ಚಯ । ಎನಗೆ ತಾತನೋ ॥ ೪ ॥

ಭೂತಾಳದೊಳು ವಿಖ್ಯಾತನೋ ನಿಜ । ದೂತಾ ಜನರಿಗೆ ಪ್ರೀತನೋ ॥
ನೀತಾ ಗುರುಜಗನ್ನಾಥಾವಿಠಲ । ಪ್ರೀತಿಯ ತಾ ಪೊಂದಿಹನೋ ॥ ೫ ॥

## ಮಾಮವ ಯತಿಕುಲೋತ್ತುಂಗ – ಗುರುಜಗನ್ನಾಥವಿಠಲ

ರಾಗ : ಪೂರ್ವಿ ಏಕತಾಳ

ಮಾಮವ ಯತಿಕುಲೋತ್ತುಂಗ ॥ ಪ ॥
ಶ್ರೀ ಮನೋಹರ ರಘು ರಾಮ ಪದದ್ವಯ । ತಾಮರಸ ಯುಗ ಭೃಂಗ ॥ ಅ । ಪ ॥

ನಿರ್ಜಿತ ಷಡ್ವರ್ಗಾಜಿತ ಹರಿಪದ । ಭರ್ಜಿತ ದೋಷ ತರಂಗ ॥ ೧ ॥
ಸಾಧಿತ ಹರಿಮತ ಭೇದಿತಪರಮತ । ಛೇದಿತ ಮಾಯಿ ಪತಂಗ ॥ ೨ ॥
ತೋಷಿತಯದುವರ ಪೋಷಿತದ್ವಿಜಕುಲ । ದೂಷಿತ ದುರ್ಜನ ಸಂಘ ॥ ೩ ॥
ಮೋದಿತಸುಜನಾರಾಧಿತ ಸುರಗುಣಾ । ಸಾದಿತ ಶ್ರೀಹರಿಯಂಗ ॥ ೪ ॥
ದಾತ ಗುರುಜಗನ್ನಾಥವಿಠಲಪದ । ಪಾಥೋದ್ಭವ ಯುಗ ಸಂಗಾ ॥ ೫ ॥

## ಗುರುರಾಜಾ ಗುರುರಾಜಾ – ಗುರುಜಗನ್ನಾಥವಿಠಲ

ರಾಗ : ಆನಂದಭೈರವಿ ಆದಿತಾಳ

ಗುರುರಾಜಾ ಗುರುರಾಜಾ ॥ ಪ ॥
ಧರಣಿಸುರರ ಸುರಭೂಜಾ ॥ ಅ । ಪ ॥

ಜ್ಞಾನಿಗಳರಸನೆ ಧ್ಯಾನಿಪ ಜನರಿಗೆ । ಜ್ಞಾನವು ಪಾಲಿಸೊ ಜ್ಞಾನಿಜನನಾಥ ॥ ೧ ॥
ಜ್ಞಾನಿಲ್ಲದೆ ಭವ ಕಾನನ ಚರಿಸುವೆ । ಮಾನಸದಲಿ ತವ ಧ್ಯಾನವ ಸಲಿಸೈ ॥ ೨ ॥
ಅನ್ಯರ ಭಜಿಸದೆ ನಿನ್ನನೆ ನಿತ್ಯದಿ । ಮನ್ನದಿ ಭಜಿಸುವ ಉನ್ನತ ಮತಿ ನೀಡೈ ॥ ೩ ॥
ನೀಚರ ಮನಿಯಲಿ ಯಾಚಿಪ ಗೋಸುಗ । ಯೋಚಿಪ ಮನವನು ಮೋಚನೆ ಮಾಡೈ ॥ ೪ ॥
ಯಾತಕೆ ಭವದಲಿ ಈತರೆ ಬಳಲಿಪಿ । ದಾತನೆ ಗುರುಜಗನ್ನಾಥವಿಠಲ ದೂತಾ ॥ ೫ ॥

## ದಯಾನಿಧೇ ಶ್ರೀರಾಘವೇಂದ್ರ – ಗುರುಜಗನ್ನಾಥವಿಠಲ

ರಾಗ : ಬೇಹಾಗ್ ಏಕತಾಳ

ದಯಾನಿಧೇ ಶ್ರೀರಾಘವೇಂದ್ರ ಗುರುವೇ । ಕಾಮಿತ ಸುರತರುವೇ ॥ ಪ ॥
ದಯಾಕರನೆ ಭವ ಭಯಾ ಹರಿಸಿ ತವ । ಜಯಾಕರ ಪಾದ ಪಯೋಜ ಯುಗ ತೋರೋ ॥ ಅ । ಪ ॥

ಧರಾತಳದಿ ಸುರತರೂ ಸುರಭಿವರ । ತೆರಾದಿ ಕಾಮಿತ ಕರಾದು ಮೆರೆಯೋ ॥ ೧ ॥
ಗಡಾನೆ ತವಪದ ಜಡಾಜ ಭಜಿಸುವ । ದೃಢಾವೆ ಕೊಡೊ ಎನ್ನೊಡೇಯ ನೀನೇ ॥ ೨ ॥
ಎಷ್ಟೊ ಪೇಳಲಿ ಎನ್ನ ಕಷ್ಟಾರಾಶಿಗಳ್ಯತಿ । ಶ್ರೇಷ್ಠಾನೆ ಕಳಿಯೊ ಉತ್ಕೃಷ್ಟಾ ಮಹಿಮ ಗುರೋ ॥ ೩ ॥
ಮೋಕ್ಷಾದ ಎನ್ನನು ವೀಕ್ಷಿಸಿ ಈಗಲೆ । ಸುಕ್ಷೇಮ ನೀಡುತ್ತಾ ಪೇಕ್ಷಾಪೂರ್ತಿಸೊ ಗುರೋ ॥ ೪ ॥
ದಾತಾನೆ ಎನ್ನಯ ಮಾತಾನು ಲಾಲಿಸೊ । ನೀತಾ ಗುರುಜಗನ್ನಾಥವಿಠಲ ಪ್ರಿಯ ॥ ೫ ॥

## ನೀ ಪಾಲಿಸೋ ಗುರುರಾಯ – ಗುರುಜಗನ್ನಾಥವಿಠಲ

ರಾಗ : ಶಂಕರಾಭರಣ ಏಕತಾಳ

ನೀ ಪಾಲಿಸೋ ಗುರುರಾಯ ಎನ್ನ । ಕಾಪಾಡೀಗ ಮಹರಾಯ ॥ ಪ ॥
ಭೂಪತಿ ನೀ ಎನ್ನ ಆಪದ್ಬಾಂಧವ । ಶ್ರೀಪತಿ ಪದ ಪ್ರಿಯ ಈಪರಿ ಮಾಡದೆ ॥ ಅ । ಪ ॥

ಪಾಪಿಗಳೊಳಗೆ ಹಿರಿಯನು ನಾ । ನಿಷ್ಪಾಪಿಗಳರಸೆ ಗುರುರಾಯ ॥
ಅಪಾರ ಜನುಮದಿ ಬಂದಿಹ । ತಾಪತ್ರಯ ಕಳಿ ಮಹರಾಯಾ ॥ ೧ ॥

ನೀಚರ ಒಳಗೆ ನೀಚನೊ ಪಾಪ । ಮೋಚನೆ ಮಾಡೋ ಗುರುರಾಯ ॥
ಯೋಚನೆ ಇಲ್ಲದೆ ಅನ್ಯರ ಅನುದಿನ । ಯಾಚಿಸಿ ಕೆಟ್ಟೆನೊ ಮಹರಾಯಾ ॥ ೨ ॥

ದೀನರ ಒಳಗೆ ದೀನನು ನಾನೈ । ದಾನಿಗಳರಸೇ ಗುರುರಾಯ ॥
ಜ್ಞಾನವು ಇಲ್ಲದೆ ನಾನು ನನದೆಂದು । ಹೀನ ಮತ್ಯಾದೆನೊ ಗುರುರಾಯ ॥ ೩ ॥

ಅನ್ನವು ಇಲ್ಲದೆ ಅನ್ಯರ ಮನೆಯಲಿ । ಕುನ್ನಿಯಾದನೋ ಗುರುರಾಯ ॥
ನಿನ್ನನೆ ನಂಬಿ ಅನ್ಯರಬೇಡೊದು । ಘನ್ನತಿ ನಿನಗೆ ಮಹರಾಯಾ ॥ ೪ ॥

ದಾತನೆ ನಿನ್ನಾ ಪೋತನು ನಾನೀ । ರೀತಿಯ ಮಾಳ್ಪರೆ ಗುರುರಾಯ ।
ನೀತ ಗುರುಜಗನ್ನಾಥವಿಠಲ ಪದ । ದೂತನು ನೀನೆ ಮಹರಾಯಾ ॥ ೫ ॥

## ಕಾಯೋ ಕಾಯೋ – ಗುರುಜಗನ್ನಾಥವಿಠಲ

ರಾಗ : ಶ್ರೀ ಏಕತಾಳ

ಕಾಯೋ ಕಾಯೋ ॥ ಪ ॥
ಕಾಯೊ ಕಾಯೊ ಗುರುರಾಯನೆ ತವ ಪದ । ತೋಯಜ ಯುಗ ಎನ್ನ ಕಾಯದಲಿಟ್ಟು ॥ ಅ । ಪ ॥

ಕ್ಷುಲ್ಲಕ ಮನುಜರ ಸೊಲ್ಲನೆ ನೀಗಿಸಿ । ಹಲ್ಲನೆ ಮುರಿಯುವ ಬಲ್ಲಿದ ನೀನೇ ॥ ೧ ॥
ಕ್ಷುದ್ರಮನುಜರೋ ಪದ್ರವ ಕಳೆದು । ಭದ್ರ ಭಕುತಿಯ ಉದ್ರೇಕವಿತ್ತು ॥ ೨ ॥
ತ್ವತ್ಸೇವಾ ಜನರಲಿ ಮತ್ಸರ ಮಾಡುವ । ಕುತ್ಸಿತ ಜನತತಿ ವಿಚ್ಛೇದ ಮಾಡುವ ॥ ೩ ॥
ನಿನ್ನಯ ಜನರನ ಮನ್ನಣೆ ಮಾಡದೆ । ಬನ್ನವ ಬಡಿಪರ ಖಿನ್ನರ ಮಾಡೀ ॥ ೪ ॥
ದೂತರ ನಿಚಯಕೆ ಈ ತೆರ ಚಿಂತೆಯು । ಯಾತಕೆ ಗುರುಜಗನ್ನಾಥವಿಠಲ ದೂತಾ ॥ ೫ ॥

## ಶ್ರೀ ಗುರುವರ ಮಾಂ ಪಾಲಯ – ಗುರುಜಗನ್ನಾಥವಿಠಲ

ರಾಗ : ಆರಭಿ ಆದಿತಾಳ

ಶ್ರೀ ಗುರುವರ ಮಾಂ ಪಾಲಯ ಭೋ !
ಶ್ರೀ ಗುರುವರ ಮಾಂ ಪಾಲಯ ಭೋ ! ॥ ಪ ॥

ದೀನಂ ತ್ವತ್ಪದಧೀನಂ ಸದ್ಗುಣಹೀನಂ । ಮಾಂ ಪಾಲಯ ಭೋ ॥ ಅ । ಪ ॥

ಆರ್ತಿಂ ಹರ, ಭವ ವಾರ್ತಿಂ, ತವ ಸಂ । ಕೀರ್ತನಂ ದಿಶ ಸದಾ ಕರುಣಾಕರ ಭೋ ॥ ೧ ॥
ರುದ್ಧಂ , ಭವಗುಣ ಬದ್ಧಂ ಜನಸುವಿ । ರುದ್ಧಂ, ಗುರೋ ಮಾಮುದ್ಧರ ಭೋ ॥ ೨ ॥
ಮಗ್ನಂ, ಸ್ತ್ರೀಸುತ ಲಗ್ನಂ, ತ್ವತ್ಪದ । ಲಗ್ನಂ, ಕುರು ಕರುಣಾಕರ ಭೋ ॥ ೩ ॥
ಪುತ್ರಂ, ಸಜ್ಜನ ಮಿತ್ರಂ, ತ್ವದ್ಗುಣ । ಚಿತ್ರಂ ಜ್ಞಾಪಯ ಶತ್ರುಹ ಭೋ ॥ ೪ ॥
ಹೀನಂ, ದುರ್ಗುಣ ಮಾನಿಂ, ತ್ವದ್ಗುಣ । ಜ್ಞಾನಿಂ ಕುರು ಕರುಣಾಕರ ಭೋ ॥ ೫ ॥
ಭಕ್ತಂ, ಸಜ್ಜನ ಸಕ್ತಂ, ವಿಷಯ ವಿ– । ರಕ್ತಂ ಕುರು ಕರುಣಾಕರ ಭೋ ॥ ೬ ॥
ದೂತಂ, ಭವ ಭಯ ಭೀತಂ, ಸದ್ಗುಣ ಖ್ಯಾತಂ, ಯತಿವರ ಕುರು ಮಾಂ ಭೋ ॥ ೭ ॥
ಪೋತಂ, ಶ್ರುತಿ ಸ್ಮೃತ್ಯ ದೀತಂ, ಪಾಪ ವಿ– । ಧೂತಂ ಕುರು ಸತ್ವರ ಮಾಂ ಭೋ ॥ ೮ ॥
ದಾಸಂ ಸ್ತ್ರೀ ಕರ ವಾಸಂ, ತ್ವತ್ಸಹ । ವಾಸಂ ಸಂದಿಶ ಸಂತತ ಭೋ ॥ ೯ ॥
ಮೂಢಂ, ಭವನಿಧಿ ಗಾಢಂ, ತ್ವತ್ಪದ । ರೂಢಂ, ಗುರುವರ ಕುರು ಮಾಂ ಭೋ ॥ ೧೦ ॥
ಚಾರಂ, ನಿರ್ಗತ ಸಾರಂ, ಬಂಧ ವಿ । ದೂರಂ ಕುರು ಕರುಣಾರ್ಣವ ಭೋ ॥ ೧೧ ॥
ಬಾಲಂ, ತ್ವದ್ಗುಣ ಶೀಲಂ, ತ್ವತ್ಪದ । ಲೋಲಂ ಕುರು ತ್ವಂ ಕುರು ಮಾಂ ಭೋ ॥ ೧೨ ॥
ಪೋತಂ, ಸ್ವಾಮ್ಯವ ಧೂತಂ, ವಿಸ್ತೃತ । ಖ್ಯಾತಿಂ ಕಾರಯ ಕಾರಯ ಭೋ ॥ ೧೩ ॥
ವ್ಯರ್ಥಂ, ದಾಪಯ ಮೇರ್ಥಂ ಕುರು ಸುಕೃ । ತಾರ್ಥಂ ಯತಿವರ ಮಾಮವ ಭೋ ॥ ೧೪ ॥
ದಾತಾ ಗುರುಜಗನ್ನಾಥವಿಠಲ । ದೂತಾಗ್ರೇಸರ ಪಾಲಯ ಭೋ ॥ ೧೫ ॥

## ಶೇಷಾಂಶ ಪ್ರಹ್ಲಾದರಾಯಾ – ಗುರುಜಗನ್ನಾಥವಿಠಲ

ರಾಗ : ಅಸಾವೇರಿ ಝಂಪೆತಾಳ

ಶೇಷಾಂಶ ಪ್ರಹ್ಲಾದರಾಯಾ ಎನ್ನ । ದೋಷ ಎಣಿಸದೆ ಕಾಯೊ ಜೀಯಾ ॥ ಪ ॥

ಕಂಡ ಕಂಡವರ ಭಜಿಸೀ ಬೇಡಿ । ಬೆಂಡಾದೆ ನಿನ್ನಂಘ್ರಿ ತ್ಯಜಿಸೀ ॥
ತೋಂಡವತ್ಸಲ ಕರುಣೆ ಸಲಿಸೀ ಪಾದ । ಪುಂಡರೀಕ್ಯನ್ನೊಳಗೆ ಇರಿಸಿಕಾಯೋ ॥ ೧ ॥

ಮಾಡಬಾರದ ಕೃತ್ಯವಾ ನಾ ಬಲು । ಮಾಡಿದೆ ಗೃಹಕೃತ್ಯವಾ ॥
ಬೇಡದಲೆ ಭೃತ್ಯತ್ವವಾ ಈ ದೋಷ । ನೋಡದಲೆ ಭಕ್ತತ್ವವಾ ನೀಡೊ ॥ ೨ ॥

ದೀನ ಜನಪಾಲ ನಿನ್ನಾ ರೂಪ । ಧೇನಿಸದೆ ಮಾನಿನಿಯರನ್ನಾ ॥

ಧ್ಯಾನ ಮಾಡಿದೆ ಬಿಡದೆ ಘನ್ನಾ ಗತಿ । ಏನು ಪೇಳಯ್ಯ ಎನಗೆ ಮುನ್ನಾ ಸ್ವಾಮಿ ॥ ೩ ॥

ಗುರುರಾಘವೇಂದ್ರರಾಯ ಎನ್ನ । ಕರೆದು ಕೈ ಪಿಡಿಯೊ ಮಹರಾಯ ॥
ತರಿಯೊ ಪಾತಕವೆನ್ನ ಜೀಯಾ । ಶರಣು ಪೊಕ್ಕೆನೊ ನಿನಗೆ ನಾನಯ್ಯಾ ಕರುಣೀ ॥ ೪ ॥

ಮಾತ ಪಿತ ಭ್ರಾತ ಬಂಧೂ ಎನಗೆ । ನೀತಗತಿಕುಲ ಗೋತ್ರವೆಂದೂ ॥
ದಾತ ನಿನ್ನ ದೂತನೆಂದೂ ಬಂದ । ನಾಥನನು ನೀ ಕಾಯುವುದು ಪ್ರಭುವೇ ॥ ೫ ॥

ಕರುಣಸಾಗರನೆ ಈತ ತವರೂಪ । ಸ್ಮರಣೆ ನೀಡೆನಗೆ ಬ್ಯಾಗಾ ॥
ಶರಣು ಪೊಕ್ಕವನ ವೇಗಾ ಭವ । ಅರಣ ದಾಟಿಸುವಂಥ ಯೋಗಾ ಪೇಳಿ ॥ ೬ ॥

ಹೋಗುತಿದೆ ಹೊತ್ತು ಪದುಮಾಕ್ಷ ಹ್ಯಾಗೆ । ಆಗುವುದೊ ನಿನ್ನ ಅಪರೋಕ್ಷ ॥
ಬಾಗಿ ಬೇಡುವೆ ಕಲ್ಪವೃಕ್ಷ ಸುರಧೇನೊ । ಜಾಗು ಮಾಡದೆ ಸಲಿಸ್ಯನ್ನಪೇಕ್ಷಾ ಸ್ವಾಮಿ ॥ ೭ ॥

ಧೀರ ಗುರುರಾಜ ಕೇಳೋ ಎನ್ನ । ಪಾರ ದೋಷಗಳನ್ನೆ ತಾಳೋ ॥
ಘೋರ ಅಜ್ಞಾನ ಕೀಳೋ ಪರಲೋಕ । ಸೇರಿಸೆನ್ನನು ಕೃಪಾಳೋ ಸ್ವಾಮಿ ॥ ೮ ॥

ಎಷ್ಟು ಪೇಳಲಿ ಎನ್ನ ತಾತಾ ಕೃಪಾ । ದೃಷ್ಟಿಯಲಿ ನೋಡು ನಾನಿನ್ನ ಪೋತಾ ॥
ಧಿಟ್ಟ ನೀ ಗುರುಜಗನ್ನಾಥವಿಠಲನ । ನಿನ್ನೊಳಗೆ ತೋರೋ ದಾತಾ ಖ್ಯಾತಾ ॥ ೯ ॥

## ರಥವಾನೇರಿದ ಯತಿವರನ್ಯಾರೇ – ಗುರುಜಗನ್ನಾಥವಿಠಲ

ರಾಗ : ರೇಗುಪ್ತಿ ಏಕತಾಳ

ರಥವಾನೇರಿದ ಯತಿವರನ್ಯಾರೇ ಪೇಳಮ್ಮಯ್ಯಾ ॥ ಪ ॥
ವಿತತ ಮಹಿಮಾ ನತ ಜನರನತಿ । ಹಿತದಿ ಪಾಲಿಸುವ ಅತುಲಮಹಿಮ ಕಾಣಮ್ಮ ॥ ಅ । ಪ ॥

ಧರೆಯೊಳು ವೈಭವದಿಂದಲಿ । ಮೆರೆಯುವನ್ಯಾರೇ ಪೇಳಮ್ಮಯ್ಯಾ ।
ಪರಮಾದ್ಭುತ ಚರಿಯುವ ಮಾಡುತ । ಸರಿಯಿಲ್ಲದಿರುವ ನ್ಯಾರೇ ಪೇಳಮ್ಮಯ್ಯಾ ॥
ಸ್ಮರಿಸುವ ಭಕುತರ ಪರಿ । ಪರಿ ಸಲಹುವನ್ಯಾರೇ ಪೇಳಮ್ಮಯ್ಯಾ ।
ಹರಿಭಕ್ತಾಗ್ರಣಿ ಎನಿಪ ಯತಿಕುಲ । ಗುರುವರ ರಾಘವೇಂದ್ರ ಕಾಣಮ್ಮಾ ॥ ೧ ॥

ಸ್ತುತಿಸುವ ಜನರಿಗೆ ಸತಿಸುತ ಸಂಪದ । ವತಿಶಯ ನೀಡುವನ್ಯಾರೇ ಪೇಳಮ್ಮಯ್ಯಾ ।
ಮತಿರಹಿತರಿಗೆ ಸುಮತಿಯ ನೀಡುವನ । ದ್ಭುತ ಮಹಿಮನು ಯಾರೇ ಪೇಳಮ್ಮಯ್ಯಾ ॥
ಇತರ ದಿವಿಜರಿಗಸಾಧ್ಯವೆನಿಸುವ । ಅತುಲ ಪರಾಕ್ರಮನ್ಯಾರೇ ಪೇಳಮ್ಮಯ್ಯಾ ।
ಭೂತಳಜನನಾಥನೆನಿಸಿ ಮಹಾ । ಭೂತಿದಾಯಕ ರಾಘವೇಂದ್ರ ಕಾಣಮ್ಮಾ ॥ ೨ ॥

ಭೂತಳ ಜನರ ವ್ರಾತಕೆ ನಿಜಸುಖ । ದಾತನು ಯಾರೇ ಪೇಳಮ್ಮಯ್ಯಾ ।

ಭೂತ ಪ್ರೇತ ಪಿಶಾಚ ಸುಮಹ । ದ್ಭೀತಿಯ ಬಿಡಿಸುವನ್ಯಾರೇ ಪೇಳಮ್ಮಯ್ಯಾ ॥
ಪಾತಕವನಕುಲವೀತಿಹೋತ್ರ ಸುಖ । ವ್ರಾತದನೆನಿಸುವನ್ಯಾರೇ ಪೇಳಮ್ಮಯ್ಯಾ ।
ದಾತ ಗುರುಜಗನ್ನಾಥವಿಠಲ ಪದ । ದೂತನೆನಿಪ ಗುರುರಾಯ ಕಾಣಮ್ಮ ॥ ೩ ॥

## ಸ್ವಸ್ತಿ ಶ್ರೀ ಜಯ ಮಂಗಳಂ – ಗುರುಜಗನ್ನಾಥವಿಠಲ

ರಾಗ : ಮಧ್ಯಮಾವತಿ ಅಟತಾಳ

ಸ್ವಸ್ತಿ ಶ್ರೀ ಜಯಮಂಗಳಂ ॥ ಪ ॥
ಸ್ವಸ್ಥಚಿತ್ತದಿ ಹರಿಯ ಭಜಿಪಗೆ । ಹಸ್ತಿವರದನ ದಾಸವರ್ಯಗೆ ॥
ಹಸ್ತದಿಂದಖಿಳಾರ್ಥ ದಾತಗೆ । ಸ್ವಸ್ತಿಕರ ಗುರುರಾಘವೇಂದ್ರಗೆ ॥ ೧ ॥

ನತಿಪಜನ ಸುರಧೇನು ಎನಿಪಗೆ । ಸತತ ಸ್ವಾಶ್ರಿತ ಪಾಲಗೆ ।
ವಿತತ ಸನ್ಮತಿದಾತ ಖ್ಯಾತಗೆ । ತುತಿಪರನುದಿನ ಪೊರೆವೊ ನಾಥಗೆ ॥ ೨ ॥

ಪಾತಕಾಂಬುಧಿಕುಂಭಜಾತಗೆ । ಪಾತಕಾದ್ರಿಕುಲಿಶರೂಪಗೆ ॥
ದಾತ ಗುರುಜಗನ್ನಾಥವಿಠಲ । ದೂತ ಜನಕತಿ ಪ್ರೀತಗೆ ॥ ೩ ॥

## ಸ್ವಾಮಿ ಲಾಲಿ – ಗುರುಜಗನ್ನಾಥವಿಠಲ

ರಾಗ : ಆನಂದಭೈರವಿ ಆದಿತಾಳ

ಸ್ವಾಮಿ ಲಾಲಿ ಭಕ್ತ ಪ್ರೇಮಿ ಲಾಲಿ । ಕಾಮದೆನಿಪ ಗುರುಸಾರ್ವಭೌಮ ಲಾಲಿ ॥ ಪ ॥
ಇಂದ್ರಲಾಲಿ ರಾಘವೇಂದ್ರ ಲಾಲಿ । ಸಾಂದ್ರಭಕ್ತಕುಮುದ ಪೂರ್ಣಚಂದ್ರ ಲಾಲಿ ॥ ೧ ॥
ತರುಣಿ ಲಾಲಿ ನಿಜ ಕರುಣಿ ಲಾಲಿ । ಶರಣ ಜನರ ಕಾಯ್ವ ಗುಣಪೂರ್ಣ ಲಾಲಿ ॥ ೨ ॥
ದೇವ ಲಾಲಿ ನಿಜಭಾವ ಲಾಲಿ । ಭಾವಿಸುವರ ನಿತ್ಯ ನೀ ಕಾವ ಲಾಲಿ ॥ ೩ ॥
ರಾಜ ಲಾಲಿ ಕಲ್ಪಭೂಜ ಲಾಲಿ । ರಾಜಿಸುವ ಯತಿಕುಲತೇಜ ಲಾಲಿ ॥ ೪ ॥
ದಾತಲಾಲಿ ನಿಜತಾತ ಲಾಲಿ । ಪ್ರೀತ ಗುರುಜಗನ್ನಾಥವಿಠಲದೂತ ಲಾಲಿ ॥ ೫ ॥

## ವಿನಯದಿಂದಲಿ ನಮಿಸುವೆನಾ – ವರದೇಶವಿಠಲ

ರಾಗ : ಧನಶ್ರಿ ಅಟತಾಳ

ವಿನಯದಿಂದಲಿ ನಮಿಸುವೆನಾ ವೃಂದಾವನದಿ ರಾಜಿಪ ರಾಘವೇಂದ್ರಗುರುವರನ ॥ ಪ ॥
ದುರಿತವಾರಣ ಪಂಚಾನನ ನರ । ಹರಿರೂಪ ಸ್ತಂಭದಿ ಪ್ರಕಟಗೈಸಿದನ ॥

ಹರಿಭಕ್ತಾಗ್ರಣಿ ಎಂದೆನಿಪನ ನಾರ । ದರ ಉಪದೇಶ ಗರ್ಭದಿ ಕೈಕೊಂಡಿಹನ ॥ ೧ ॥

ಸಿರಿವ್ಯಾಸತೀರ್ಥರೆನಿಪನ ಪುರಂ । ದರ ದಾಸಾರ್ಯರಿಗುಪದೇಶ ಗೈದವನ ॥
ವರ ಚಂದ್ರಿಕಾ ರಚಿಸಿದ ದುಷ್ಟ । ಪರಮತಾದ್ರಿಗಳಿಗೆ ಕುಲಿಶನೆನಿಪನ ॥ ೨ ॥

ಶ್ರೀಸುಧೀಂದ್ರಕರಾಬ್ಜಜನ ದಿವ್ಯ । ಭಾಸುರ ಪರಿಮಳ ಗ್ರಂಥಕರ್ತನ ॥
ಮೀಸಲಮನದಿ ಭಜಿಪರ ದೋಷ । ನಾಶನಗೈಸಿ ಪೋಷಿಸುವಶಕ್ತನ ॥ ೩ ॥

ವರಮಂತ್ರಸದ್ಮನಿಲಯನ ಶ್ರೀ । ಗುರುಮಧ್ವಮತದುರಂಧರನೆನಿಸುವ ॥
ಹರಿಪ್ರೀತಿಪೂರ್ಣಪಾತ್ರನ ಈ । ಧರೆಯೊಳು ಬಹುಪರಿಮೆರೆವ ಮುನಿಪನ ॥ ೪ ॥

ತುಂಗಾಭದ್ರತೀರವಾಸನ ಶುಭ । ಮಂಗಳಚರಿತ ಕಮಂಡಲಧರನ ॥
ರಂಗ ವರದೇಶವಿಠಲನ ಪದ । ಭೃಂಗ ಯತಿಕುಲ ಕುಜಾರ್ಕ ಸನ್ನಿಭನ ॥ ೫ ॥

## ದುರಿತಾ ಜೀಮೂತವಾತ – ವಿಜಯದಾಸರು

ರಾಗ : ಸಾವೇರಿ ಆದಿತಾಳ

ದುರಿತಾ ಜೀಮೂತವಾತ । ಪೊರಿಯ್ಯೆ ನಿನಗೆ ನಿರುತ ।
ಶರಣು ಪೋಗುವೆ ನೀತ । ಕರಪಿಡಿಯೋ ಪ್ರೀತ ॥
ಧರಣಿಯೊಳಗೆ ವಿಸ್ತರಿಸಬಲ್ಲವರಾರು ।
ಗುರುವೆ ನಿಜನಮಿತರ ಸುರತರುವೆ ॥ ಪ ॥

ನಂಬಿದೆ ನಿನ್ನಪಾ । ದಾಂಬುಜವನುಗಾಲ ।
ಬೆಂಬಿಡದಲೆ ನಾ । ನೆಂಬೋದು ಬಿಡಿಸಿಂದು ।
ಬೆಂಬಲವಾಗು ಆ । ರೆಂಬ ಖಳರನೀಗು ॥
ಇಂಬಾಗಿ ನೋಡು ದಿ । ವ್ಯಾಂಬಕದಿಂದ ವೇಗ ।
ಡಿಂಬಾರೋಪೀರೆ । ಡಂಬಕ ತನವೆಂಬುದು ಕೊಡದಲೆ ।
ಸಂಭ್ರಮದಲಿ ಹರಿ । ದೊಂಬಲ ಬಯಸುವ ।
ಹಂಬಲಿಗರ ಕೂಡ । ಇಂಬುತೋರು ಬಲು ।
ಗಂಭೀರ ಕರುಣಿ ॥ ೧ ॥

ಎಣೆಗಾಣೆ ನಿಮಗೆ ಕುಂ । ಭಿಣಿ ಯೊಳಗೆಲ್ಲ ಯತಿ ।
ಮಣಿಯೆ, ರಾಮವ್ಯಾಸರ । ಮಣಿ ಭೂಷಣಾಚರಣಾ ।
ರ್ಚನೆ ಮಾಳ್ಪಮಹಿಮಾ । ಮನಸಿಜಶರ ಭೀಮ ।
ಮನದಣಿ ಗುಣಿಸಿ ಈ । ದಿನ ಮೊದಲು ಪಿಡಿದು ।
ಜನುಮ ಜನುಮವ ಸಾ । ಧನ ಫಲಿಸಿತು ಯೋ ।
ಚನೆಗೊಳಲ್ಯಾತಕೆ । ಅನುಮಾನ ಸಲ್ಲದು ।
ಘನತರ ಕೀರ್ತಿಯೋ । ಜನ ನೂರಾರಕೆ ।
ಯೆಣಿಕೆಯಿಲ್ಲದೆ ಮೆರೆವ । ದಿನ ಪ್ರಭಾಕಾಯ ॥ ೨ ॥

ವರಹಜೆ ಸರಿತೆಯಲ್ಲಿ । ಸ್ಥಿರವಾಗಿ ನಿಂದು ಕ್ಷಣ- ।
ಸುರರಿಂದಾರಾಧನೆ । ಸರಸರನೆ ಹಗಲು ।
ಇರುಳು ಕೈಕೊಳುತ ವ । ಕ್ಕಾರಗಳ ಹರಿಸಿ ಸುಂ -।
ದರ ವರಗಳನಿತ್ತು । ಚಿರಕಾಲ ಬಿಡದಲೆ ।
ಪರವಾದಿಯ ಬಲ । ಉರದಲ್ಲಣ ದೂತರೆ ಸುಧೇಂದ್ರರ ।
ಕರಾರವಿಂದ ಜ । ಅರಸರಸರ । ಪ್ರಿಯ ವಿಜಯವಿಠ್ಠಲನ ।
ಬಿರಿಯ ಯೊಯಿಸುವ ಧೀರಾ ।
ಗುರುರಾಘವೇಂದ್ರಾ ॥ ೩ ॥

## ಗುರುರಾಜ ನಿಮ್ಮ ನಿಜ ಪರಮ – ಗೋಪಾಲದಾಸರು

ರಾಗ : ಕಾಂಬೋಧಿ ಝಂಪಾತಾಳ

ಗುರುರಾಜ ನಿಮ್ಮ ನಿಜ ಪರಮ ಅನುಗ್ರಹದಿ ಸಂ-।
ಚರಿಸುವ ಭಕುತರಿಗೆ ।
ದುರುಳ ಜನರಿಂದ ಮಾಡಲಿ ಪಟ್ಟ ದುಷ್ಟಕ್ರೀಯ ।
ನೆರೆಸೊ ಕಾಲರಿಯವವನ ನೊಡ ॥ ಪ ॥
ಕ್ಷುದ್ರ ಮೃಗಗಳು ಬಹುಶತಕೂಡಿ ಸಿಂಹ ಕೂ-।
ಪದ್ರವನು ಕೊಡಬಲ್ಲವೆ ।
ಅದ್ರಿಗಳು ಸುರಪತಿಯ ವಜ್ರಕ್ಕೆ ಮಲತಿನ್ನು ।
ಉದ್ವಾಹತೆಯನು ಐದೊವೆ ।
ಕದ್ರುವೆಯ ಸುತರೆಲ್ಲವಂದಾಗಿ ಖಗಪತಿ ಗು- ।
ಪದ್ರವನು ಕೊಡಬಲ್ಲವೇ ।
ನಿದ್ರರಹಿತನಾದ ಶ್ರೀಹರಿಯದಾಸರಿಗೆ ।
ಭದ್ರವಲ್ಲದೆ ಬ್ಯಾರೆ ಛುದ್ರಮಾತುಂಟೆ ॥ ೧ ॥

ಆರು ಸ್ವಾತಂತ್ರವಿಲ್ಲೆಂದು ಶ್ರೀವಿಷ್ಣು ವ್ಯಾ -।
ಪಾರ ಸರ್ವತ್ರ ಅರಿದು ।
ಕಾರಣ ಪುರುಷ ಸುಖದುಃಖ ಕೊಟ್ಟನೆಯೆಂದು
ಭಾರ ನಿಮ್ಮಲ್ಲಿ ಇಟ್ಟು ॥
ಮೀರದೆ ಆಜ್ಞಾನುಸಾರ ನಡೆದ ಉಪ- ।
ಕಾರಿ ಸುಜನರಿಗೆ ಯೆನಿಸಿ ।
ಈ ರೀತಿಲಿಪ್ಪ ನಿಮ್ಮ ಕಾರುಣ್ಯಪಾತ್ರನಿಗೆ ।
ಆರು ಸೈರಿಸಲಾರದೇನು ಮಾಡುವರು ॥ ೨ ॥

ಈಸು ಕಲಿಯಲಿಯೆಂದು ಹರಿವ ಜಲಧಿಯೊಳುಬಿಡೆ ।
ಆ ಶಿಶುವಿಗಾವ ಭಯವೊ ।
ಪಾಷಾಣಾದಿಗಳ ಸ್ಥಿತಿಯನು ಮುನ್ನಿಸಿದ್ದರು ।

ಪೋಷಣೆಗೆ ಆದರ ಚಿಂತೆ ।
ಪಾಶಾ ನಿಮ್ಮ ಕರುಣ ಆಧಾರವಿರಲು ।
ಮುಣಿಗಿಸ ಬಲ್ಲರೆ ಅನ್ಯರು ।
ದೋಷರಹಿತ ದೇವ ಗೋಪಾಲವಿಠಲನ್ನ ।
ದಾಶರ ಕರುಣ ಸಾಧಿಸಿ ತೋಷದಲಿಪ್ಪ ॥ ೩ ॥

## ಕಷ್ಟ ಸಂಸಾರವೆಂಬ ಅಟ್ಟುಳಿಗೆ – ಗೋಪಾಲದಾಸರು

ರಾಗ : ಕಾಂಬೋಧಿ ತ್ರಿವಿಡಿತಾಳ
ಕಷ್ಟ ಸಂಸಾರವೆಂಬ ಅಟ್ಟುಳಿಗೆ ನಾ ಆರೆ ।
ಕೃಷ್ಣೋಪಾಸಕ ರಾಘವೇಂದ್ರ ॥ ಪ ॥
ವರ್ಣಿಸಲು ಕುಳಿತರೆ ವಶವಲ್ಲಯಿದಕಂತ್ಯ ।
ವನ್ನು ಕಂಡಿವರ ಈಗ ಕಾಣೆ ।
ಎನ್ನಂತೆ ಬಳಲುವರು ಯಿಲ್ಲ ಯೋಚಿಸಿ– ।
ನಿನ್ನ ತೋರುವರು ಆರಿಲ್ಲ ।
ದಣಿದು ಹಣ್ಣು ಹಣ್ಣಾದೆ ನಾಯೆಲ್ಲಾ ಅಯ್ಯಾ।
ನಿನ್ನ ಹೊರತಾಗಿನ್ನು ।
ಎನ್ನ ದಾಟಿಸುವವರ ನಾಕಾಣೆ ತಂದೆ ಮುಂದೆ ॥ ೧ ॥

ಮೂರು ಗುಣ ಪ್ರವಾಹ ಸುಳಿಯೊಳಗೆ ಬಿದ್ದು ನಾ ।
ಯೇರಲಿ ದಡವ ಕಾಣೆನಯ್ಯಾ ।
ಆರರಿಗಳೆಂಬಹಿಯ ಕಾಟ ಕೇಳು ।
ನಾರಿ ಸುತರ ಕೂಟಾ ಶಿಲ್ಕಿ ।
ಪಾರಗಾಣೆವು ಪಾಯ ದಾಟ ಚೆಲ್ವ ।
ನಾರಾಯಣ ಮುಖ್ಯ ಕಾರುಣ್ಯಕೆ ಪಾತ್ರ ।
ಸಾರಿದೆನು ನಿನಗೆ ವೇಗ ಈಗು ॥ ೨ ॥

ಒಮ್ಮೆ ಮುಣುಗುವೆನಯ್ಯಾ, ಮೊಮ್ಮೆತಳ ಕೆಳನಾಹೆ ।
ಒಮ್ಮೆ ಎಲೆ ಎತ್ತುವೆನು ನಲಿವೆ ।
ಅಮ್ಮೊಮ್ಮಾ ಎನ್ನ  ಆಯುಸವ ತರಿದು ।
ನಿಮ್ಮ ಚರಣಗಳ ಸೇವಿಸುವ, ಲಾಭ ।
ಸುಮ್ಮತಿಯನಿತ್ತು ಸಂತೋಷ ವಾಚಲ್ವ ।
ರಮ್ಮೆ ಅರಸಾ ನಮ್ಮ ಗೋಪಾಲ ವಿಠಲರ ಪರ ।
ಬೊಮ್ಮನ ಅರ್ಚಿಸುತ ಸಮ್ಮನಸಕಾಂಸಾ ॥ ೩ ॥

## ಮರೆವರೆ ಎನ್ನ ರಾಘವೇಂದ್ರ – ವಾಸಿದೇವ ವಿಠಲ (ವ್ಯಾಸ ತತ್ವಜ್ಞರು)

ರಾಗ : ಯರಕಲ ಕಾಂಬೋಧಿ  ತ್ರಿವಿಡಿತಾಳ
ಮರೆವರೆ ಎನ್ನ ರಾಘವೇಂದ್ರ ಗುರುವೆ ಸಂಪನ್ನ ।

ಕರೆದು ಕಾಮಿತಗಳ ಕರೆವೆ ನಿಮಗೆಂದು ॥ ಪ ॥

ದಾರಿತಪ್ಪಿ ಪೋಗುವ ವೀರಾ ಪೋರನ್ನ ।
ದಾರಿವಿಡಿಸಿನ್ನು ಪುರವನ್ನು ಸೇರಿಸಿ ।
ಊ(ನಾ)ರಿನವಳಗೆ ಅವನ ಆಗ।
ದೂರನೋಡುವರೆ ದೋಷಗಳ ವಿ । ಚಾರ ಮಾಡುವರೆ ।
ಧೀರರು ಆವಪರಿಯಲಿವನ ಪಾರುಗಾಣಿಪರಲ್ಲವೆ ॥ ೧ ॥

ಹಸಿದು ಪರಾನ್ನ ಕೇಳದಲೆ ದ್ವಿಜವರಿಯನ್ನ ।
ಶಿಶುವಿನ್ನ ನೋಡಿ ದಯದಿಂದ ಕರದಿನ್ನು ।
ಹಸಿದ್ಯಾಕೊ ಎಂದು ಪಾಕವಮಾಡಿ ।
ಹಸನಾಗಿ ತಂದು ಬಡಿಸುತ । ವಸರಾದಿನಿಂದು ಅವನದೋಷ ।
ಪಸರಿಸಿ ವುಣಿಸಾದ ಜನರುಂಟೆ ಧರಯೊಳು ॥ ೨ ॥

ಜಲಪಾನಾತುರನಾಗಿ ಜಲವಕೇಳದ ವಿದ್ರ ।
ಕುಲ ತರುಣನ ನೋಡಿ ಕೃಪೆಯಿಂದ ಸುರನದಿ ।
ಜಲವೀವೆನೆಂದು ಬ್ಯಾಗನೆ ದಿವ್ಯ । ಕಲಶವು ತಂದು ಬಾರೆಲೊ ।
ಬಲು ಆಲಸ್ಯವ್ಯಾಕೆಂದು ನಿನ್ನಯ ಪಂಕ ।
ತೊಳಿಯೆ ಕೊಡುವೆನೆಂದು ತಡವ ಮಾಡುವರೆ ॥ ೩ ॥

ಸುಶರೀರ ತನವನ್ನು ಮನದಲ್ಲಿ ಬಯಸಿ ತಾ ।
ವುಸರದ ಮುಣಿನಿಯ ತನುಯನು ಕಂಡುತಾವಗಿ ।
ಕುಶಲವು ಕೇಳಿ ದೇವತಾ ವೈದ್ಯ ।
ಅಸುಮರೆಂದ್ಹೇಳಿ ಅವಗೆ ದಿವ್ಯ । ರಸವನ್ನು ದೇಳಿ ನಿನ್ನಲಿದ್ದ ।
ಕಿಸರು ಪೊರದರೆ ಕೊಡುವೆನೆಂದುನುಡಿವರೆ ॥ ೪ ॥

ಆರ್ತಿಯ ಭಕುತನ್ನ ನೋಡೀಗ ನಿನ್ನ ದಿವ್ಯ ।
ಕೀರ್ತಿಯ ನೋಡಿಕೋ ವಾಸುದೇವ ವಿಠಲನ್ನ ।
ಮೂರ್ತಿಯ ಭಜಕ ಭಕ್ತರಭೀಷ್ಟಾ ।
ಪೂರ್ತಿಗೆ ಜನಕ ನಿನ್ನಯಗುಣ । ಸ್ಫೂರ್ತಿಯುಳ್ಳನಕ ಪಾಪದಲೇಶ ।
ವಾರ್ತಿಯ ಎನಗೆಯಿಲ್ಲ ಎಂದು ನಿಶ್ಚೈಸಿದೆ ॥ ೫ ॥

## ಮುನಿಗಳ ನೋಡಿರೊ ಭಕುತಿ – ಗುರುಗೋಪಾಲವಿಠಲ

ರಾಗ : ಭೈರವಿ ಆದಿತಾಳ
ಮುನಿಗಳ ನೋಡಿರೊ ಭಕುತಿ ।
ಜ್ಞಾನಧನವ ಬೇಡಿರೋ ॥
ಅನಲದೇವನ ಮತ ವನರಾಶಿಗೆ ಶುಭಚಂದ್ರಾ ।
ಗುರು ರಾಘವೇಂದ್ರಾ ॥ ಪ ॥

ಮನದಲನವರತ ನೆನವ ಸುಜನರಿಗೆವೊಲಿದು ।
ಮದದಲಿ ನಲಿದು ।
ಘನಮಣಿ ಕನಕ ಭೂಷಣಗಣ ಆಯುರಾರೋಗ್ಯ ।
ಸಕಲ ಸೌಭಾಗ್ಯ ॥
ವನತೆ ತನುಜ ಧನಮನೆ ಅಂದಣ ಸುಜ್ಞಾನಾ ।
ಹರಿಭಕುತಿ ನಾನಾ ।
ಮನೋರಥ ನೆನೆದಾಕ್ಷಣವಿತ್ತು ಪಾಲಿಪಯೋಗಿ ।
ಪರಮವೈರಾಗಿ ॥ ೧ ॥

ಜನಕ ಜಾಮಾತನ ಗುಣಕ್ರೀಯರೂಪಗಳೆಲ್ಲಾ ।
ಧೇನಿಸ ಬಲ್ಲ ।
ಜನಕಾದಿಗಳಂದದಿ  ನಿಃಸಂಗದಿ ಮೌನಿ ।
ಅಪರೋಕ್ಷ ಜ್ಞಾನಿ ॥
ಜನಕ ಸುತರ ಪೊರವಂದದಿ ಭಕ್ತರಪೊರವ ।
ಜಗದೊಳು ಮೆರೆವ ।
ಜನನರಹಿತ ಜಗಜ್ಜನನಾದಿಕಾರಣ ಹರಿಯ ।
ವೊಲಿಸಿದ ಪಿರಿಯಾ ॥ ೨ ॥

ಭೂತಪ್ರೇತ ದ್ವಿಜಗ್ರಹ ಪೈಶಾಚ ಬೇತಾಳ ।
ಉಗ್ರಗ್ರಹಗಳ ।
ಭೀತಿಯಿಂದಲಿ ಅನ್ಯತ್ರತರ  ಕಾಣದೆ ಬಂದಾ ।
ಜನರ ದಯದಿಂದ ॥
ತಾತವಕದಿ ಪಾದತೋಯದಿಂದೋಡಿಸಿ ।
ಭಯವನು ಬಿಡಿಸಿ ।
ಶ್ವೇತಕುಷ್ಟ ಪಿತ್ತಸೀತ ವಾತರೋಗಗಳಕಳೆವ ।
ಕೀರ್ತಿಲಿ ಪೊಳಿವಾ ॥ ೩ ॥

ಗುರು ಸುಧೀಂದ್ರರ ಕರಸರಸಿರುಹ ಜಾತಾ ।
ಕೇವಲ ಪ್ರಖ್ಯಾತಾ ।
ಧರಿಯೊಳು ಜಯಮುನಿ ವರದ ಶಾಸ್ತ್ರದ ಭಾವವ ।
ಮಥಿಸಿ ಗ್ರಂಥವ ರಚಿಸಿ ॥
ಪರಮ ಶಿಷ್ಯರಿಗುಪದೇಶವನು ಮಾಡಿ ।
ಸಂಶಯ ಈಡಾಡಿ ।
ನರಹರಿ ಸರ್ವೋತ್ತಮನೆಂದು ಮೆರೆವ ।
ಭಕುತರ ಪೊರೆವ ॥ ೪ ॥

ಸಿರಿವರ ಗುರುಗೋಪಾಲವಿಠಲನ್ನ ಶರಣಾ ।

ಮುನಿ ಶಿರೋಭರಣಾ ।
ಮೊರೆಹೊಕ್ಕ  ಜನರ ದುರಿತಗಜಕೆ ಭೇರುಂಡಾ ।
ವರಯತಿ ಶೌಂಡ ॥
ಪರಮತ ದುರುಳಕುವಾದಿ ಸಂಘಜೀಮೂತಾ ।
ಝುಂಝಾವಾತಾ ।
ನೆರೆನಂಬಿದವರಿಗೆ ಸುರತರು ಚಿಂತಾಮಣಿಯೊ ।
ಶುಭೋದಯ ಖಣಿಯೋ ॥ ೫ ॥

## ರಾಘವೇಂದ್ರ ಗುರುರಾಯಾ ಘೋರ – ಜಗನ್ನಾಥವಿಠಲ

ರಾಗ : ಪೂರ್ವಿ ಅಟತಾಳ

ರಾಘವೇಂದ್ರ ಗುರುರಾಯಾ ಘೋರ ಪಾ– ।
ಪೌಘಗಳೆಣಿಸದೆ ಪಾಲಿಸು ಬಿಡದೆ ॥ ಪ ॥

ಪ್ರಕಟಿಸಿತೋರಿದೆ  । ಮುಕುತಿಯ ಬೇಡಿದ ।
ಭಕುತನ ಯೋಗ್ಯತೆ । ನಿಖಿಳ ಜನರಿಗೆ ॥ ೧ ॥
ಕನಲಿದ ಜನಪನ ಅನುನಯದಲಿ ನಿ– ।
ಮ್ಮನುಗನ ಮಾಡಿದ । ಘನತರ ಚರಿತಾ ॥ ೨ ॥
ಪತಿತನ ನಿಜಯೋ । ಗ್ಯತಿಯ ತಿಳಿದು ಸ– ।
ದ್ಗತಿಯ ಪಾಲಿಸಿದ । ಯತಿಕುಲ ವರಿಯಾ ॥ ೩ ॥
ದ್ವಾದಸ ವರುಷ । ನ್ನೋದಕ ಸಲಿಸಿದೆ ।
ಮೇದಿನಿ ಪತಿಗೆ ಮ । ಹಾ ದಯವಂತ ॥ ೪ ॥
ಕ್ಷಿಪ್ರದಿ ತೋರಿದೆ । ವಿಪ್ರರ ಮಹಿಮೆಯ ।
ಸುಪೃಥಿವೀಶಗೆ । ಅಪ್ರತಿ ಗುರುವೆ ॥ ೫ ॥
ವಿಪಿನದಿ ಚಂಡಾ । ತಪನದಿ ಬೆಂದ ಕಾ – ।
ಶ್ಯಪಿ ಸುರರುಳಿಹಿದ । ಕೃಪಣ ಜನಾಪ್ತ ॥ ೬ ॥
ಹುತವಹಗುಣಿಸಿದ । ರತುನ ಮಾಲಿಕಿಯ ।
ಕ್ಷಿತಿಪತಿಗೆ ತಂದಿ । ತ್ತತುಳ ಮಹಿಮನೆ ॥ ೭ ॥
ಭೃತ್ಯಗೆ ಬಂದ ಪ । ಮೃತ್ಯು ಬಿಡಿಸಿ ಸುಖ – ।
ವಿತ್ತು ಪೂರದೆ ಪುರು । ಷೋತ್ತಮ ದಾಸ ॥ ೮ ॥
ಪೊಳಲ ಮಾರ್ಗದೊಳು । ಲಲನೆ ಪ್ರಸೂತಿಸೆ ।
ಪುಳಿನ ಕಮಂಡಲ । ದೊಳು ಜಲ ತೋರ್ದೆ ॥ ೯ ॥
ಬಿಸಲಿಂದ ಬಳಲುವ । ಶಿಶುವಿಗೆ ಚೈಲಾ– ।
ಗಸದಿ ನಿಲ್ಲಿಸಿದ । ಅಸಮ ಮಹಿಮನೆ ॥ ೧೦ ॥
ಚ್ಯೂತ ಫಲರಸದಿ । ಪೋತ ಮುಳುಗೆ ಮೈತಿ– ।
ಭೀತಿ ಬಿಡಿಸಿದ ಅ । ನಾಥ ರಕ್ಷಕಾ ॥ ೧೧ ॥
ಯತಿವರ ದೂರದಿ । ಮೃತಿಗೈಲಾಗಸ ।
ಪಥದಲಿ ಕಂಡಾ । ನತಿಸಿದ ಮಹಿಮಾ ॥ ೧೨ ॥
ಅನಿವೇದಿತ ಭೋ । ಜನ ವಸ್ತುಗಳಿಂ– ।

ದನುಭವ ಮಾಡಿಸಿ । ದನುಪಮ ಚರಿತಾ ॥ ೧೩ ॥
ಭಾಷಾತ್ರಯ ಯುತ । ವ್ಯಾಸೋಕ್ತಿಗಳ ಪ್ರ-।
ಕಾಶವ ಗೈಸಿದ । ಭೂಸುರ ವಿನುತಾ ॥ ೧೪ ॥
ಪಾದೋದಕವ ದಿ । ನೇದಿನೆ ಸೇವಿಸಿ ।
ಸಾಧುಗಳಾದಿ । ವ್ಯಾಧಿಗಳಳಿವೆ ॥ ೧೫ ॥
ಸಾದರದಲಿ ಹ । ಸ್ತೋದಕ ಕೊಡಲು ನಿ- ।
ಷೇಧ ಗೈಯದೆ ನಿ । ವೇದಿಪ ಹರಿಗೆ ॥ ೧೬ ॥
ದಾತ ಗುರು ಜಗ । ನ್ನಾಥ ವಿಠಲನ ।
ದೂತನೆ ಮಂತ್ರ ನಿ । ಕೇತನ ನಿಲಯ ॥ ೧೭ ॥

## ಸ್ಮರಿಸಿ ಬೇಡುವೆನು ನಾ - ಜಗನ್ನಾಥವಿಠಲ

ರಾಗ : ಕಾಂಬೋಧಿ ಝಂಪಾತಾಳ

ಸ್ಮರಿಸಿ ಬೇಡುವೆನು ನಾ, ಹೇ । ಗುರುಸಾರ್ವಭೌಮಾ ॥ ಪ ॥
ನಿರುತ ನೀಪೊರೆ ಎನ್ನ ವಾದಿಗಜ ಸಿಂಹ ॥ ಅ । ಪ ॥

ದಿತಿ ಸುತಗೆ ಸುತನೆನಿಸಿ । ಅತಿ ಮುದದಿ ಸುರಮುನಿಯ ।
ಮತ ಹಿಡಿದು ಹರಿ ಮಹಿಮೆ ಪಿತಗೆ ಪೇಳಿ ॥
ಖತಿಗೊಂಡು ನಿನ್ನ ಮೂರುತಿ ತೋರೆನಲು ಶ್ರೀ- ।
ಪತಿಯ ಸ್ತಂಭದಿ ಕರೆದ ಪ್ರಲ್ಹಾದರಾಜ ॥ ೧ ॥

ಬಾಲ್ಯದಲಿ ಯತಿಯಗಿ । ಲೀಲೆಯಿಂದಲಿ ಭೂಮಿ- ।
ಪಾಲಗೊದಗಿರ್ದ ಕುಹುಯೋಗ ಬಿಡಿಸಿ ॥
ಖೂಳ ಮಾಯ್ಗಳ ಜಯಿಸಿ ಚಂದ್ರಿಕಾಗ್ರಂಥವನು ।
ಪೇಳಿ ಹರಿ ಪೀಠ ವೇರಿದ ವ್ಯಾಸರಾಜ ॥ ೨ ॥

ಕಾಮರಿಪುನುತ ಮೂಲ । ರಾಮ ಪದಯುಗ ಕುಮುದ ।
ಸೋಮನೆನಿಸುವ ಭಕ್ತಸ್ತೋಮಕೆಲ್ಲ ॥
ನೇಮದಿಂದಲಿ ವಿವಿಧ ಕಾಮಿತಾರ್ಥ ಸ್ಫುಟಿತ ।
ಹೇಮ ಸನ್ನಿಭಗಾತ್ರ ಪಾವನ ಚರಿತ್ರ ॥ ೩ ॥

ಶಾಂತತೆಯ ಪೊಂದಿ । ಮಂತ್ರಾಲಯದಿ ವೃಂದಾವ ।
ನಾಂತರದೊಳಿರುತ ಶಿರಿಕಾಂತ ಹರಿಯಾ ।
ಚಿಂತಿಸುತಲಿಹ ಸರ್ವತಂತ್ರ ಸ್ವತಂತ್ರ ಕರು- ।
ಣಾಂತರಂಗನೆ ರಾಘವೇಂದ್ರಯತಿವರ್ಯಾ ॥ ೪ ॥

ಮೂಕ ಬಧಿರಾಂಧತ್ವಗಳ ಪೊಂದಿ ಧರಣಿಯೊಳು ।
ವ್ಯಾಕುಲವ ಪಡುವವರನುದ್ಧರಿಸುತ ॥
ನಾಕಪತಿ ವಿನುತ ಜಗನ್ನಾಥ ವಿಠಲ ಮಧು ಪ ।

ನೀ ಕೊಟ್ಟು ಸಲಹೆನ್ನಭೀಷ್ಟ ಸಮುದಾಯ ॥ ೫ ॥

## ಯೋಗಿ ಬಾರೋ ನೀ ತ್ಯಾಗಿ ಬಾರೋ – ಜಗನ್ನಾಥವಿಠಲ

ರಾಗ : ಭೀಮಪಲಾಸ ಆದಿತಾಳ

ಯೋಗಿ ಬಾರೋ ನೀ ತ್ಯಾಗಿ ಬಾರೋ । ಸಾಗಿ ಬಾರೋ ॥
ಯೋಗಿಗಳೊಡಯ ರಘವೇಂದ್ರಾ । ರಾಯ ಬಾರೋ ॥ ಪ ॥

ಶ್ರುತಿ ಪುರಾಣಗಳರ್ಥ । ಸೂಕ್ಷ್ಮದಿಂದ ತಿಳುಹಿದನೆ ।
ಅತಿ ಹರಿಷದಲಿ ಆತ್ಮಜ್ಞಾನಿ ರಾಘವೇಂದ್ರ ।
ಪ್ರತಿಗಾಣೆನಿನ್ನು ಕ್ಷಿತಿಯೊಳಗೆ । ರಾಯಬಾರೋ ॥ ೧ ॥

ರಾಗ : ಕಲ್ಯಾಣಿ

ಅದ್ವೈತ ಮತವೆಂಬ ಆರೆ ಬಂಡೆಯಮೇಲೆ ।
ಮಧ್ವಾಚಾರ ಮತವೆಂಬ ಕಣಕವ ।
ಮಧ್ವಾಚಾರ ಮತವೆಂಬ ಕಣಕವನು ಕಟ್ಟಿದನು ।
ಸಿದ್ಧಾಂತವನಕೇಲಿ ಶ್ರೀರಾಘವೇಂದ್ರ ॥ ೨ ॥

ರಾಗ : ಪುನ್ನಾಗರಾಳಿ

ರಾಮನ ಚರಣವ ಪ್ರೇಮದಿಂದಲಿ ಭಜಿಸಿ ।
ಕಾಮಿತ ಫಲಗಳ ಕೊಡುತಿಪ್ಪ ।
ಕಾಮಿತ ಫಲಗಳ ಕೊಡುತಿಪ್ಪ ರಾಘವೇಂದ್ರ ।
ಶ್ರೀಮಂತ ನೀನಹುದು ಅಷ್ಟದಿಕ್ಕಿನಲಿ ॥ ೩ ॥

ರಾಗ : ಸಾರಂಗ

ಮಾರುತಿಮತವೆಂಬವಾರಿಧಿ ಚಂದ್ರ ।
ಕಾರುಣ್ಯದಿಂದಲಿ ಕಾಮಿತವೀವ ॥
ಕಾರುಣ್ಯದಿಂದಲಿ ಕಾಮಿತವೀವ ಉ–।
ದಾರಿ ನೀನಹುದೋ ಶ್ರೀರಾಘವೇಂದ್ರ । ಜೋಜೋ ॥ ೪ ॥

ರಾಗ : ಮಾಯಾಗೌಳವ

ಶಂಕರನ ಮತವೆಂಬೋ ಸದ್ದಡಗಿಸಿದವನೆ ।
ಪಂಕಜನಾಭನ ಪಾದಸೇವಕನೆ ।
ಪಂಕಜನಾಭನ ಪಾದಸೇವಕನೆ ।
ಅಂಕಿತದಿಂದಲಿ ದಂತಿ ರಾಘವೇಂದ್ರ । ಕೋಲು ಕೊಲೆನ್ನಿರೆ ರನ್ನದ ॥ ೫ ॥

ರಾಗ : ಆನಂದ ಭೈರವಿ

ಎಷ್ಟುವರ್ಣಿಸುವೆ ಯತಿ ಶಿರೋಮಣಿ ರನ್ನ ।
ಕಷ್ಟಪಡಿಸುವ ದುಷ್ಕರ್ಮ ।

ಕಷ್ಟಪಡಿಸುವ ದುಷ್ಕರ್ಮ ಬಿಡಿಸುವ ।
ಸೃಷ್ಟಿಯೊಳಗೆ ಕಾಣೆನಿನ್ನು ॥ ೬ ॥

ರಾಗ : ಸುರಟಿ
ಘನಯತಿ ಶಿರೋಮಣಿ ಕೇಳ್ದಿದನು ।
ಅನುದಿನವು ಸಕಲ ಸಂಪದವಿತ್ತು ಜ – ।
ಗನ್ನಾಥ ವಿಠಲನಂಘ್ರಿಗಳ ತೋರಿಸುವರು ।
ಜಯ ಮಂಗಳಂ ನಿತ್ಯ ಶುಭಮಂಗಳಂ ॥ ೭ ॥

## ಮಂಗಳಂ ಶ್ರೀರಾಘವೇಂದ್ರಗೆ – ಜಗನ್ನಾಥವಿಠಲ

ರಾಗ : ಕಾಂಬೋಧಿ ಏಕತಾಳ

ಮಂಗಳಂ ಶ್ರೀರಾಘವೇಂದ್ರಗೆ । ಶುಭ– ।
ಮಂಗಳ ಸುಜನಾಂಬುಧಿ ಚಂದ್ರಗೆ ॥ ಪ ॥

ಶ್ರೀಸುಧೀಂದ್ರಕುಮಾರಗೆ ಮಂಗಳ ।
ಭೂಸುರನುತ ಮಹಿಮಗೆ ಮಂಗಳ ॥
ದೇಶಿಕಕುಲ ವನಜಾರ್ಕಗೆ ಮಂಗಳ ।
ಭಾಸುರ ಕೀರ್ತಿಯ ಪಡೆದವನಿಗೆ ॥ ೧ ॥

ವೃಂದಾವನ ದಿವಿಯೊಳಗೆ ಸುರದ್ರುಮ ।
ದಂದದಿ ರಾಜಿಸುವವಗೆ ಮಂಗಳ ॥
ಅಂಧ ಪಂಗು ಮೂಕ ಬಧಿರರೀಪ್ಸಿತ ।
ಸಂದೋಹ ಸಲಿಸುವ ಸ್ವಾಮಿಗೆ ॥ ೨ ॥

ಭೂತಪ್ರೇತ ಭೇತಾಳ ಭಯವಿಪಿನ ।
ವೀತಿಹೋತ್ರ ನೆನಿಪಗೆ ಮಂಗಳ ॥
ವಾತಜನಕ ಜಗನ್ನಾಥವಿಠಲನ ।
ದೂತರ ಸಲಹುವ ದಾತನಿಗೆ ಮಂಗಳಂ ॥ ೩ ॥

## ರಾಘವೇಂದ್ರ ಗುರುರಾಯಾ – ರಾಮಚಂದ್ರವಿಠ್ಠಲ

ರಾಗ : ಸಾವೇರಿ ಮಟ್ಟತಾಳ
ರಾಘವೇಂದ್ರ ಗುರುರಾಯಾ । ಸಲಹಬೇಕಯ್ಯಾ ॥ ಪ ॥
ನೀಗಿಸು ಭವರೋಗ ನಿತ್ಯ । ಬಾಗಿಸುಸಜ್ಜನರ ಪಾದಕೆ ॥ ಅ । ಪ ॥

ನೂರುಸಾವಿರಕೋಟಿ ಸಂಖ್ಯೆಗೆ ।
ಮೀರಿದ ಬಹುವಿಧ ಜನರಿಗೆ ।
ಹಾರೈಸಿ ಬೇಡಿಕೊಡುವಂಥ ವರವಕೊಟ್ಟು ಅವರ ।

ಸಾರೆಗರೆದು ಪಾಲಿಸುವಂಥಪರಿವಾರ ಜನರಿಗೆ ।
ಆರುರಸದನ್ನವನೆಕೊಡುವಂಥಾ ಜಗದೊಳಗೆ ಅತಿಶಯ ।
ವಾರಿಜಾಕ್ಷನೆಂಬಂಥಾ ಮಹಿಮೆ ನಾನೋಡಿ ।
ಕೀರುತಿಗೆ ಮರುಳಾಗಿ ನಮಿಸಿದೆ ।
ಗಾರುಮಾಡದೆ ಹತ್ತೆ ಕರೆಯೊ ॥ ೧ ॥

ರಾಮನೆ ನಿಮ್ಮೊಳಗೆ ನಿಂದು ।
ಪ್ರೇಮ ಪೂಜೆಯೆನೆ ಕೊಂಡು ।
ಭೂಮಿಯೊಳಗೆ ನಿಮ್ಮನ್ನೆ ಮೆರೆಸುವಾಕಾಮಿತ ಜನರಿಗೆ ।
ನೇಮದಿಂದಲಿ ವರವ ತಾ ಕೊಡುತ ಸ್ವರ್ಗಾದಿಂದ ।
ಕಾಮಧೇನ್ವಾದಿಗಳ ತರಿಸುವಾ ನಾ ಬೇಡಿಕೊಂಬೆನೊ ।
ಪ್ರೇಮದಿ ಕೊಡು ಎನಗೆ ನೀವರವ ।
ಧೀಮಂತನೇ ದಯವಂತನೇ ಶ್ರೀ- ।
ರಾಮ ಪದ ಸರಸಿಜ ಭೃಂಗನೆ ॥ ೨ ॥

ಶ್ರೀ ಮನೋಹರ ನಂಘ್ರಿ ಕಮಲವ ।
ನೇಮದಿಂದಲಿ ಸ್ತೋತ್ರಮಾಡುವ ।
ಧೀಮಂತನು ತಾವೇ ಕಾರುಣ್ಯ ಎನಗೊಲಿದು ಮಾಡಲು ।
ಈ ಮಹಾವರ ವೀಯಲು ಧನ್ಯನಾನೇನ ಬಲ್ಲೆನೊ ।
ಭೂಮಿಯಾವೊಳಗಿದ್ದ ಧನಧಾನ್ಯ । ಅಸ್ಥಿರವೆಂಬುವ ।
ನೇಮಬಲ್ಲೆನೊ ಕುಜನರೊಳು ಮಾನ್ಯ ನೀಕೊಡಲಿಬ್ಯಾಡ ।
ರಾಮಚಂದ್ರವಿಠಲನ ಪದ ।
ತಾಮರಸ ಹೃತ್ಕಮಲದಲಿ ತೋರೋ ॥ ೩ ॥

## ಕರೆದು ಕೈಪಿಡಿಯೊಯನ್ನಾ – ರಾಮಚಂದ್ರವಿಠ್ಠಲ

ರಾಗ : ಮೋಹನ ಆದಿತಾಳ

ಕರೆದು ಕೈಪಿಡಿಯೊಯನ್ನಾ , ಶ್ರೀರಾಘವೇಂದ್ರಾ ।
ಗುರುವೆ ಕರುಣಾ ಸಂಪನ್ನ ॥ ಪ ॥

ಗುರುವೆ ನಿಮ್ಮಯ ಚರಣ ಕಮಲಕೆ ।
ಶರಣು ಹೊಕ್ಕೆನೊ ಅರೆಮರಿಲ್ಲದೆ ।
ಸುರತರುವೆ ನಿರುತದಲಿ ಎನ್ನನು ।
ಪೊರೆಯೊ ಬಾರಿಂದೆರವು ಮಾಡದೆ ॥ ಅ । ಪ ॥

ಘೋರ ಸಂಸಾರವೆಂಬ ವಾರಿಧಿಯೊಳು ।
ಮೇರೆಗಾಣದಲಿಹೆನೋ ।
ಆರು ವರ್ಗಗಳೆಂಬ ವಾರಿಚರ ಮಕ್ಕ – ।
ಮಾರಿ ಬಾಧೆಗೆ, ಎದೆಯಾರೀ ಬಿದ್ದೆನಿಂದು ।

ದಾರಿ ನೋಡುವರಿಲ್ಲವೋ, ನಿನ್ಹೊರತು ಆ- ।
ಧಾರ ಒಬ್ಬರ ಕಾಣೆವೋ, ನೀನೇ ದೀನೋ - ।
ದ್ಧಾರನೇಂಬುದ ಬಲ್ಲೆವೋ ।
ಧೀರಯತಿ ಪರೋದ್ಧಾರ ಭಯಹರ ।
ಸಾರಿದವರಿಗ ಪಾರ ಸುಖಕರ ।
ಸೇರಿದೆನೊ ಪರಿಚಾರಿಗನು ।
ಸಾರಿ ಎನ್ನನು ಬಾರಿಬಾರಿಗೆ ॥ ೧ ॥

ಕಂಡಕಂಡವರ ಬಳಿಗೆ । ಥಂಡ ಥಂಡದಿ ಹೋಗಿ ।
ದಿಂಡು ತೀರುಗೀತೀ ದೇಹಾ ।
ಸಂಡಿಗ್ಹಾಯಿತೋ ಬೇಡಿಕೊಂಡೆ, ಕೋಡಗನಂತೆ ।
ದಂಡವಾಯಿತೊ ಮಾನ ಅಂಡಲಿವೆನೊ ಈಗ ।
ಭಂಡು ಮಾಡುವದು ಚಿತವೇ, ದಾಸನ ದೋಷ ।
ಖಂಡ್ರಿಸದಿದು ಥರವೇ, ಹೀನನ ಲಜ್ಜಾ ।
ಕಂಡು ಬಿಡುವದು ಚಿತವೇ, ನಾನೊಬ್ಬ ಭೂ- ।
ಮಂಡಲದೊಳಗಿರುವೆ ।
ಮಂಡಲಾಧಿಪ ಪಂಡಿತೋತ್ತಮ ।
ಚಂಡ ಖಳಕೃತ ಷಂಡತ ಮತ ಮಾ।
ರ್ತಾಂಡನೆ ಮುನಿವರೋದ್ದಂಡ ಸಜ್ಜನ ।
ಪಂಡಿತನೆ ನಾನುದ್ದಂಡ ನಮಿಸುವೆ ॥ ೨ ॥

ಬಂದು ನಿನ್ನ ಪಾದವಾ,  ಹರುಷದಿಂದ ।
ವಂದಿಸುವಾ ಜನರ ।
ಮಂದಾರ ತರುವಂತೆ ಛಂದಛಂದದಿ ಮನ- ।
ಬಂದವರನೆಲ್ಲಾ ಸಂದೇಹವಿಲ್ಲದೆ ।
ತಂದು ಕೊಡುವೆ ಬಿಡದೇ, ಅವರ ದೋಷ ।
ಒಂದನೂ ನೀ ನೋಡದೇ, ಅವರಂತೆ ನೋ- ।
ಡಿಂದೆನ್ನನು ಬಿಡದೇ, ಎನ್ನ ತಾಯಿ ।
ತಂದೆ ಗಧಿಕ ನೋಡಿದೇ ।
ಇಂದಿರಾಮನ ಮಂದಿರಾ, ಶ್ರೀಶ - ।
ಸುಂದರ ರಾಮಚಂದ್ರ ವಿಠ್ಠ- ।
ಲೇಂದೀವರ ಪದವೃಂದ ಸೇವಾ- ।
ನಂದ ಪೂರಿತ ಬಂದು ಮುಂದಕೆ ॥ ೩ ॥

## ವಸುಧೆಯೊಳಗೆಣೆಗಾಣೆನೋ – ವೆಂಕಟೇಶವಿಠ್ಠಲ
## (ಶ್ರೀ ವರದಗೋಪಾಲವಿಠಲರ ಶಿಷ್ಯರು )

ರಾಗ : ಮಧ್ಯಮಾವತಿ ಅಟ್ಟತಾಳ

ವಸುಧೆಯೊಳಗೆಣೆಗಾಣೆನೋ ಈ ಗುರುಗಳಿಗೆ ।
ಅಸುಪತಿ ಸಮದಿಂದ್ಯೆಶಸುವ ಕುಶಲರಿಗೆ ॥ ಪ ॥

ಶ್ರೀರಮಣನ ಪಾದಸಾರಸ ಮಧುಪ ।
ಸೂರಿ ಜನ ವಿನುತ ಶ್ರೀ ರಾಘವೇಂದ್ರರಿಗೆ ॥ ೧ ॥
ಬಂದ ಜನರಿಗಾನಂದಗರೆವ ।
ಕುಂದು ರಹಿತ ಕಾಮನಂದಿಗಳೊಡೆಯರಿಗೆ ॥ ೨ ॥
ದಿಟ್ಟ ವೆಂಕಟೇಶವಿಠಲನ ಪಾದವ ।
ಮುಟ್ಟಿ ಭಜಿಪರೊಳು ಶ್ರೇಷ್ಠರೆನಿಸುವರಿಗೆ ॥ ೩ ॥

## ಇಂದು ಎನ್ನನು ಬಂದು ರಕ್ಷಿಸೊ – ಶ್ರೀಜನಾರ್ಧನ ವಿಠಲ

ರಾಗ : ಭೈರವಿ ಅಟ್ಟತಾಳ

ಇಂದು ಎನ್ನನು ಬಂದು ರಕ್ಷಿಸೊ ।
ತಂದೆ ಗುರು ರಾಘವೇಂದ್ರನೇ ॥
ಮಾಂದಮತಿ ನಾ ಮನದಿ ಮಾಡುವ ।
ಕುಂದುಗಳ ನೀನೆಣಿಸದೆ ॥ ಪ ॥
ಭಕ್ತಿಕರ್ಮವಿರಕ್ತಿಯನು ಮಾಡಿ ।
ಭಕ್ತಜನ ನಿನಸಂಗದೊಳು ನಲಿ – ।
ದುಕ್ತಿವಂದನ ನುಡಿದು ಪರಮಾ – ।
ಸಕ್ತಿಯಿಂದಲಿ ಪಾಡುತಾ ॥
ತ್ಯಕ್ತಿಸೀ ವಿಷಯಾಂಬುಧಿಯನು ।
ಮುಕ್ತಿದಾತನ ನಾಮ ಮುಂಕೊಂಡು ।
ಯುಕ್ತಿಯಿಂದಾಚರಿಸದೆಲೆ ಸಲಹೋ ।
ಶಕ್ತ ನೀನೆಂದು ನಂಬಿದೆ ॥ ೧ ॥

ವಾರ್ತಿ ನುಡಿಸರಿ ಕೀರ್ತಿಪುರುಷನೆ ।
ಆರ್ತನಾಗಿ ಆಚರಿಪ ಜಗ ।
ಪಾರ್ಥಸಖನಾಪಾರ ತಂತ್ರಬಲ್ಲ ।
ಭ್ರಾತೃ ಮಾತೃ ಪಿತೃ ಬಂಧುವೆ ॥
ಪೂರ್ತಿಸದೋ ಮನಸ್ತೋತ್ರಮಾಡಲು ।
ತೀರ್ಥ ತುಂಗತೀರ ವಾಸನೆ ।
ಮೂರ್ತಿಮಂತದಿ ನಿಂತು ಮುಖದಾ ।
ಮೂರ್ತಾಮೂರ್ತದಿ ಮುನಿರಾಯ ॥ ೨ ॥

ಕರವ ಪಿಡಿ ಜ್ಞಾನ ಕಾಮಧೇನುವೆ ।

ಚರಣಪೊಂದಿದೆ ಚಿಂತಾಮಣಿಯೆಂದು ।
ನರಮಾತ್ರದವ ಮರೆತ ಕಾಲಕು ।
ಪರಿಗ್ರಹವ ಮಾಡಿ ಪರಸುಖ ॥
ಪರಿಪಾಲಿಪ ರಾಮನಾದ ಜ- ।
ನಾರ್ದನನ ವಿಠಲನ್ನ ಪಾದವ ।
ನಿರುತ ಹೃದಯ ನಿಮ್ನದಲಿ ತೋರುವ ।
ಶರಣ ಜನ ಮನೋಹಾರನೇ ॥ ೩ ॥

## ಸುವ್ವಿ ಸಾಧ್ವಿಯರು, ರಾಘಾವೇಂದ್ರರ ಪಾಡಿ – ಪ್ರಾಣೇಶವಿಠ್ಠಲ

ರಾಗ : ಕಾಂಬೋಧಿ ಅಟ್ಟತಾಳ

ಸುವ್ವಿ ಸುವ್ವಾಲಿ ।
ಸುವ್ವಿ ಸಾಧ್ವಿಯರು, ರಾಘವೇಂದ್ರರ ಪಾಡಿ ॥ ಪ ॥
ಅಂದಿನಕಾಲದ ಮಧ್ವಶಾಸ್ತ್ರ ಮನಕೆತಂದು ।
ಅಂದದ ಟಿಪ್ಪಣಿ ಮಾಡಿದ ದೇವರಾರು । ಸುವ್ವಿ ॥
ಅಂದುವಾದಿಸುವ ಜನರನ್ನು ಬಾಯಿಮುಚ್ಚಿಸಿದ ।
ಚಂದಿರವದನೆ ಈತ ನಮ್ಮಗುರುವು । ಸುವ್ವಿ ॥ ೧ ॥
ಇವರಚರಿತೆಯನ್ನು ತೋರಿದಷ್ಟು ತುತಿಸುವೆ ।
ಕಿವಿಗೊಟ್ಟುಕೇಳುವದು ಬುಧಜನರು । ಸುವ್ವಿ ॥
ಪವನಾಂಶರಿವರು ಕವಲಿಲ್ಲ ಖ್ಯಾತರಾಗಿ ।
ಅವನಿಯ ಸುರರಿಂದರ್ಚನೆಗೊಂಬುವರು । ಸುವ್ವಿ ॥ ೨ ॥
ಅಷ್ಟಾಕ್ಷರ ಮಂತ್ರವನು ತಪ್ಪದಲೆ ನಿತ್ಯವಾಗಿ ।
ನಿಷ್ಠೆಯಿಂದ ಭಜಿಸಲು ಭೂತಭಯವು । ಸುವ್ವಿ ।
ಕುಷ್ಠರೋಗ ಕ್ಷಯಪಾಂಡುಜ್ವರ ಸನ್ನಿಮೊದಲಾದ ।
ಅಷ್ಟುಪದ್ರವಾಕ್ಷಣ ಬಿಟ್ಟು ಓಡುವವು । ಸುವ್ವಿ ॥ ೩ ॥
ಮೃತ್ತಿಕ ಮಾಲೆ ಅಂಗಾರ ದಿವ್ಯಮಂತ್ರಾಕ್ಷತೆಯು ।
ಹತ್ತಿರವಿರಲು ಕ್ಲೇಶವ ಲೇಶಕಾಣರು । ಸುವ್ವಿ ॥
ಎತ್ತಹೋದರು ಜನರಿಗೆ ಜಯಪ್ರದ ತೋರುವದು ।
ಕತ್ತಲಿಲ್ಲ ಶತಸಿದ್ಧ ಮತ್ತೇನುಕೇಳಿ । ಸುವ್ವಿ ॥ ೪ ॥
ಪಂಡಿತರುಮೊದಲಾಗಿ ಹಸ್ತಿ ಉಷ್ಟ್ರಕುದುರೆಯ ।
ಹಿಂಡುಗಳು ತೃಷೆಯಿಂದ ಬಳಲುತಿರೆ । ಸುವ್ವಿ ॥
ದಂಡಜಗತಿಗೂರಿ ತೋಯ ತೆಗಿಸಿಯವನೀ ।
ಮಂಡಲದೊಳಗೆ ಪೆಸರಾದರಿವರು । ಸುವ್ವಿ ॥ ೫ ॥
ಕಟ್ಟಲಿಯ ಭತ್ತದೊಳು ಭೂಪ ಧಳಯುಕ್ತ ಬರ- ।
ಲಿಟ್ಟುಕೊಂಡು ಉಣಿಸಿ ಉತ್ತಮ ವರವ ಸುವ್ವೀ ॥
ಕೊಟ್ಟುಕಳಿಸಿದ ಮೇಲೆ ಅವು ಕೊಂಚಿಯಾಗಲಿಲ್ಲ ।
ಗಟ್ಟಿ ಸಂಕಲ್ಪರಿವರು ಮುನಿವರರು । ಸುವ್ವೀ ॥ ೬ ॥
ವಿಪ್ರರೆಲ್ಲರು ಕೇಳಿಸಿ ಕಟ್ಟಿಸಿದ ಸದನವ ।

ಥಟ್ಟನೆ ಕೆಡಿಸಿ ಭೂಪಮೆಚ್ಚುವಂದದಿ । ಸುವ್ವಿ ॥
ನೆಪ್ಪು ಧರೆಗಾಗಲೆಂದು ಗುರು ಸುಧೀಂದ್ರಕುಮಾರ ।
ಸರ್ಪನ ತೋರಿಸಿ ಸುಪ್ರಖ್ಯಾತರಾದರು । ಸುವ್ವಿ ॥ ೭ ॥
ದ್ವಿಜಸ್ತೋಮವು ಬಾಯಿಬಿಡುತಿರೆ ದಯದಿಂದ ।
ನಿಜಕಾಷ್ಟವಿಳೆಗೆ ನಿಲ್ಲಿಸಿ ಮರವ । ಸುವ್ವಿ ॥
ಸೃಜಿಸಿ ಪಲ್ಲವ ಫಲಯುಕ್ತವಾಗಿ ತೋರಿಸಿದ ।
ಭಜಸಿರಿವರನ್ನು ಮಕ್ಕಳು ಬೇಡವವರು । ಸುವ್ವಿ ॥ ೮ ॥
ಮುತ್ತಿನ ಮಾಲಿಕೆ ನೃಪ ಭಕ್ತಿಯಿಂ ಕೊಡಲಾಗಿ ।
ಸಪ್ತ ಜಿಂಹ್ವಗುಣಿಸಿದ ಸರ್ವರು ನೋಡಿ । ಸುವ್ವಿ ॥
ಮತ್ತೆ ಬೇಡಲು ಪಾವಕನಿಗೆ ಪ್ರಾರ್ಥನೆಯ ಮಾಡಿ ।
ಮರ್ತ್ಯಪಗೆ ಇತ್ತರು ಮೊದಲಂತೆಯೇ ತಂದು ।ಸುವ್ವಿ ॥ ೯ ॥
ಹಿಂದೆ ಮಾಡಿದ ದುಷ್ಕರ್ಮ ತೀರ ಬಂದುದ ನೋಡಿ ।
ಬಂದಾಕ್ಷಣದಲ್ಲಿ ಅವನ ವಿಚಾರಿಸಿ । ಸುವ್ವಿ ॥
ಇಂದಿರೇಶನ ಕಾರುಣ್ಯ ಬಲದಿಂದ ಜನ ನೋಡೆ ।
ಸಂದೇಹವಿಲ್ಲದೆ ಸುಲೋಕವನಿತ್ತರು । ಸುವ್ವಿ ॥ ೧೦ ॥
ತುಂಗಾತೀರ ಮಂತ್ರಾಲಯದಲ್ಲಿ ಶ್ರಾವಣ ಬಹುಳ ।
ಮಂಗಳ ಬಿದಗಿಯಲ್ಲಿ ನಿವಾಸವಾದರು । ಸುವ್ವಿ ॥
ಶೃಂಗಾರ ವೃಂದಾವನ ದ್ವಾದಶನಾಮ ಶ್ರೀ ಮುದ್ರೆಯು ।
ಕಂಗಳು ಸಾಲವು ನೋಡ, ಹೊದ್ದ ಶಾಟಿಯ ಸುವ್ವಿ ॥ ೧೧ ॥
ಅಂಧ, ಬಧಿರ, ಕುಂಟ ನಾನಾರೋಗಿಗಳು ಮತ್ತೆ ।
ಕಂದ ವರ್ಜ್ಯ ಮೊದಲಾದವರಿಗೆ ಕಾಮ್ಯ । ಸುವ್ವಿ ॥
ತಂದು ಕೊಡುವರು ಬೇಗ ಇತರ ಸಂಶಯವಿಲ್ಲ ।
ಮಂದಭಾಗ್ಯರಿಗೆ ಇವರ ಸೇವೆ ದೊರೆಯದು । ಸುವ್ವಿ ॥ ೧೨ ॥
ಕೌತುಕವೇನೆನ್ನಲಿ ಮುಂಜಿ ವಿವಾಹ ಮಾಡಿಸುವರು ।
ಚಾತುರ್ಮಾಸದೊಳಗೆ ಗ್ರಹಗಳಸ್ತವಾಗೆ । ಸುವ್ವಿ ॥
ಧಾತಪಿತ ನಿಲಯ ವಿದೇನೋಯೆಂದು ತೋರುವದು ।
ಪ್ರೀತಿಯುಳ್ಳ ಭಕ್ತರಿಗೆ ಅಧಮರಿಗಲ್ಲ । ಸುವ್ವಿ ॥ ೧೩ ॥
ಪಾದ್ಯ ಪೂರ್ವಾರಾಧನೆ ಉತ್ತರಾರಾಧನಿಗೆ ।
ಒಡ್ಡಿ ಬರುವದು ಎಂಟು ದಿಕ್ಕುಗಳಿಂದ ಜನವು ॥
ಕಡ್ಡಿಹಿಡಿಯದಂಥ ಸಂದಣಿಯೊಳು ಸನ್ಮುಹರ್ತದಿ ।
ದೊಡ್ಡರಥವೇರಿ ಮಠವ ಸುತ್ತುವರು । ಸುವ್ವಿ ॥ ೧೪ ॥
ಇಷ್ಟೇಯೆನಲು ವಶವಲ್ಲ ಮಹಿಮೆಗಳಿನ್ನೂ ಉಂಟು ।
ನಷ್ಟಮಾಡುವರು ದುರ್ಮತ ದಾರಿದ್ರವ । ಸುವ್ವಿ ॥
ಸೃಷ್ಟಿಗೊಡೆಯ ಪ್ರಾಣೇಶವಿಠ್ಠಲನೆಂದು ಪೇಳ್ವರು ।
ಎಷ್ಟು ಪೇಳಿದರು ಎನ್ನಿಂದಲಿ ತೀರದು । ಸುವ್ವಿ ॥ ೧೫ ॥

## ಜಯಮಂಗಳಂ ನಿತ್ಯ ಶುಭಮಂಗಳಂ – ಪ್ರಾಣೇಶವಿಠಲ

ರಾಗ : ಭೈರವಿ ಝಂಪಾತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥
ಯೋಗೀಂದ್ರ ತೀರ್ಥಕರ ರಾಜೀವ ಪೂಜಿತಗೆ ।
ಭಾಗವತ ಜನಪ್ರಿಯರೆನಿಸುವವರಿಗೆ ॥
ಯೋಗಿಗಳಧಿಪತಿ ಸುದೀಂದ್ರಕರಜಾತರಿಗೆ ।
ಬಾಗಿ ವಂದಿಪರ ಸಲಹುವ ಸ್ವಾಮಿಗೆ ॥ ೧ ॥
ವರಹಜಾತೀರ ಮಂತ್ರಾಲಯ ನಿಕೇತನಿಗೆ ।
ಧರಣಿಯೊಳಗಪ್ರತಿಮ ಚರಿತೆ ತೋರ್ವವಗೆ ।
ಕುರುಡ ಕಿವುಡಾದಿಗಳ ಬಯಕೆ ಪೂರೈಪರಿಗೆ ।
ವರಸು ವೃಂದಾವನದಿ ಶೋಭಿಪರಿಗೆ ॥ ೨ ॥
ಆರಾಧನೆಯ ಜನರು ಮಾಡುವದು ನೋಡಲ್ಕೆ ।
ವಾರ ವಾರಕ್ಕಧಿಕ ವೆನೆಸುವರಿಗೆ ॥
ಮಾರಮಣ ಪ್ರಾಣೇಶ ವಿಠಲಂಘ್ರಿ ಜಲಜಕೆ ।
ಆರುಪದವೆನಿಪಗೆ ಕರುಣಾ ಜಲಧಿಗೆ ॥ ೩ ॥

## ಶ್ರೀರಾಮಚಂದ್ರಾಂಘ್ರಿ ಸರಸಿರುಹ – ಪ್ರಾಣೇಶವಿಠಲ

ರಾಗ : ಭೈರವಿ ಝಂಪಾತಾಳ

ಜಯಮಂಗಳಂ ನಿತ್ಯ ಶುಭಮಂಗಳಂ ॥ ಪ ॥
ಶ್ರೀರಾಮಚಂದ್ರಾಂಘ್ರಿ ಸರಸಿರುಹ ಬೃಂಗನಿಗೆ ।
ಧೀರ ಸುಧೀಂದ್ರರ ಕರಸಂಭೂತಗೆ ।
ವಾರಾಹಿತೀರ ಮಂತ್ರಾಲಯ ನಿಕೇತನಿಗೆ ।
ಶ್ರೀರಾಘವೇಂದ್ರರಾಯರ ಚರಣಕೆ ॥ ೧ ॥
ಪರಮತಧ್ವಾಂತ ಭಾಸ್ಕರಗೆ ಸ್ವರ್ಣಾಭಗೆ ।
ಶರಣರಭಿಲಾಷೆ ಪೂರೈಸುವರಿಗೆ ।
ದರುಶನಾದಿ ತ್ರಿಭಾಷದರ್ಥ ಬಲ್ಲವರಿಗೆ ।
ಮರುತ ಮತ ಕಡಲಿಗುಡುಪತಿಯೆನಿಪಗೆ ॥ ೨ ॥
ಪ್ರಾಣೇಶ ವಿಠಲನವರೊಳು ಪ್ರೀತಿಯುಳ್ಳವರಿಗೆ ।
ಕ್ಷೋಣಿಯೊಳು ಸರಿಯಿಲ್ಲದ ಮಹಿಮನಿಗೆ ॥
ಧ್ಯಾನಕ್ಕೆ ಬಂದೊದಗುತಿಪ್ಪ ಗುರುರಾಯರಿಗೆ ।
ಮೀನಾಂಕಜಿತ ದೇಶಿಕವರ್ಯಗೆ ॥ ೩ ॥

## ಮಂಗಳಂ ಮಂಗಳಂ । ಜಯ – ಪ್ರಾಣೇಶವಿಠಲ

ರಾಗ : ಸೌರಾಷ್ಟ್ರ ಅಟ್ಟತಾಳ

ಮಂಗಳಂ ಮಂಗಳಂ । ಜಯ
ಮಂಗಳಂ ಶ್ರೀಸುಧೀಂದ್ರಾಬ್ಧಿಜ ಚಂದ್ರ ॥ ಪ ॥
ನಾಭಿಜ ನಾಬಿಜ ನಾಭಿಜ ಪದಕಂಜ ।
ಶೋಭಿತ ಕೇಳಿ ಬಿಡಿದೆಮ್ಮ ನಾಳಿ ॥ ೧ ॥
ಕೋಲಜ ಕೂಲ ಸುಸ್ಶೀಲ ಮಂತ್ರಾ ಮಂದಿ– ।

ರಾಲಯ ವಾಲಯ ಪಾಲಯ ಮಾಂ ಗುರು ॥ ೨ ॥
ಏನೇನು ಮಾಡಲು ನೀನೊಲಿಯದಲೆಂದು ।
ಪ್ರಾಣೇಶವಿಠಲನ ಕಾಣರೊ ಜನರು ॥ ೩ ॥

## ಪಾಲಿಸು ಸದ್ಗುಣಸಾಂದ್ರ – ವೆಂಕಟೇಶವಿಠಲ (ಶ್ರೀಜಗನ್ನಾಥದಾಸರ ಶಿಷ್ಯರು)

ರಾಗ : ಸುರಟಿ ಅಟ್ಟತಾಳ

ಪಾಲಿಸು ಸದ್ಗುಣಸಾಂದ್ರ । ಶ್ರೀರಾಘವೇಂದ್ರ ॥ ಪ ॥
ಯತಿಕುಲ ತಿಲಕ ಸದ್ಗತಿ ದಾಯಕನೆ । ದು–
ರ್ಮತಖಂಡನ ಘೋರ ದುರಿತಹರಾ । ಕಲುಷಹಾರಾ ॥ ೧ ॥
ಭಕ್ತ ಸ್ತೋಮ ಭವಭಯ ಪರಿಹಾರ । ವಿ–
ರಕ್ತ ಮುನೇಂದ್ರ ಶ್ರೀಗುರುಸಾರ್ವಭೌಮ । ಸುಜ್ಞಾನಾಬ್ಧಿಸೋಮ ॥ ೨ ॥
ದೋಷವರ್ಜಿತ ವೆಂಕಟೇಶನ ದೂತಾ ।
ದಾಸನಿನ್ನವನೆಂದು ಪೋಷಿಸುತ್ವರಿತಾ । ಬಿನ್ನೈಸುವೆ ನಿರುತಾ ॥ ೩ ॥

॥ ಶ್ರೀರಾಘವೇಂದ್ರಗುರ್ವಂತರ್ಗತ ಶ್ರೀಮಧ್ವೇಶಾರ್ಪಣಮಸ್ತು ॥

ಕೊಡುಗೆ:–
ಶ್ರೀಹರೀಶ್ ಕೆಂಪದಾಳಿ
ನಾಗರಭಾವಿ
ಬೆಂಗಳೂರು